# 8

# ಆಹಾಬನ ಕೊನೆಯ ಅವಕಾಶ

## (1 ಅರಸು 20)

ನೀವು ಬಹುಶಃ ಜಾಹೀರಾತುಗಳಲ್ಲಿ, "ಕೊನೆಯ ಅವಕಾಶ!"; "ಎಂಬುದನ್ನು ನೋಡಿರಬಹುದು"; "ಐವತ್ತು ಮೈಲಿ ಗ್ಯಾಸ್ ಮತ್ತು ಊಟಕ್ಕಾಗಿ ಕೊನೆಯ ಅವಕಾಶ"; "ಡಾಡ್ಜನ್ನು ಈ ಬೆಲೆಗಳಲ್ಲಿ ಕೊಳ್ಳಲು ಇದೇ ಕೊನೆಯ ಅವಕಾಶ"; "ಸರ್ಕಸ್ ಈ ಪಟ್ಟಣವನ್ನು ಬಿಡುವ ಮೊದಲೇ ನೋಡಿರಿ"; ಇದೇ ಕೊನೆಯ ಅವಕಾಶ ಮುಂತಾದವುಗಳು. ಕೆಲಸಾರಿ ಈ ಸಂಗತಿಗಳು ಸಹಾಯಕಾರಿಯಾಗಿರುತ್ತವೆ; ಕೆಲಸಾರಿ ಇಲ್ಲ. ಒಂದು ಸಾರಿ ನಾನು ನನ್ನ ಕುಟುಂಬದೊಂದಿಗೆ ಗ್ಯಾಸೋಲಿನಿನ ಬೆಲೆಯು ಮಿತಿಮೀರಿದ ರಾಜ್ಯದ ಮೇಲೆ ಪ್ರಯಾಣಿಸುತ್ತಿದ್ದೆನು. ನಾವು ಅದನ್ನು ತುಂಬುವ ನಿಲ್ದಾಣಕ್ಕೆ ಬಂದಾಗ ಅಲ್ಲೊಂದು ದೊಡ್ಡ ಬಿಲ್ಲ್ ಬೋರ್ಡ್ ಇತ್ತು; "ಕೊನೆಯ ಅವಕಾಶ $1.50 ಗೆ ಒಂದು ಗ್ಯಾಲನ್ ಗ್ಯಾಸೋಲೆನ್!" ಎಂದಿತ್ತು. ಬೆಲೆಯ ಏರಿಕೆಯ ಭಯವು ನಮಗೆ ಆಗ ಎದುರಾಗಿತ್ತು, ನಾವು ನಿಂತೆವು ನಮ್ಮ ಟ್ಯಾಂಕನ್ನು ತುಂಬಿಸಿಕೊಂಡೆವು. ಸ್ವಲ್ಪ ಸಮಯದಲ್ಲಿಯೇ ನಮ್ಮ ಪ್ರಯಾಣವನ್ನು ನಾವು ಪುನಃ ಆರಂಭಿಸಿದೆವು, ನಾವು ಆ ರಾಜ್ಯವನ್ನು ದಾಟಿದೆವು ಮತ್ತು "ಗ್ಯಾಸೋಲೆನ್" ಇನ್ನೊಂದು ರಾಜ್ಯದಲ್ಲಿ ಇದಕ್ಕಿಂತ ಕಡಿಮೆ ಬೆಲೆಯಲ್ಲಿದೆ ಎಂದು ಕಂಡುಕೊಂಡೆವು!

ಕೆಲಸಾರಿ, "ಕೊನೆಯ ಅವಕಾಶ" ಎಂಬ ಅವಕಾಶಕ್ಕೆ ಮಹತ್ವವು ಇರುತ್ತದೆ. ವಿಮಾನಗಳು ಸಾಗರವನ್ನು ದಾಟುವಾಗ ಅವುಗಳು "ತಿರುಗಿ ಬಾರದ ಅಂಶಕ್ಕೆ" ಬಂದು ತಲುಪುತ್ತವೆ, ಅವುಗಳ ಕೊನೆಯ ಅವಕಾಶವು ಯಾವುದೆ ತೊಂದರೆ ಇದ್ದರೆ ಮಾತ್ರ ನಾವುಗಳು ಹಿಂತಿರುಗಬೇಕು. ಅವುಗಳು ತಮ್ಮ ಇಂಧನಲ್ಲಿ ಅರ್ಧದಷ್ಟು ಉಪಯೋಗಿಸಿದ ನಂತರವೇ ಮಾತ್ರ ಮುಂದುವರೆಯಲು ಅವುಗಳಿಗೆ ಅವಕಾಶವಿರುವದು.

1 ನೇಯ ಅರಸು ಅಧ್ಯಾಯ 20 ಆಹಾಬನ "ಕೊನೆಯ ಅವಕಾಶ"ದ ಬಗೆಗೆ ಹೇಳುತ್ತದೆ. ಈ ಒಂದು ಗುರುತರವಾದ ಅಧಾಯ್ಯದಲ್ಲಿ ತಾನೇ ನಿಜ ದೇವರು ಎಂದು ಗುರುತಿಸುವಂತೆ ದೇವರು ಆಹಾಬನಿಗೆ ಅವಕಾಶಗಳ ಮೇಲೆ ಅವಕಾಶಗಳನ್ನು ಕೊಟ್ಟನು. ಈ ಅಧ್ಯಾಯದಲ್ಲಿ ಎಲೀಯನು ಕಾಣಿಸಿಕೊಳ್ಳುವುದಿಲ್ಲ. ಹಿಂದಿನ ಅಧ್ಯಾಯದಲ್ಲಿ ಎಲೀಯನು "ನನಗೆ ಸಾಕಾಗಿದೆ" (1 ಅರಸು 19:4) ಎಂದು ಹೇಳಿದನು. ಆತನು ಆಹಾಬನನ್ನು ತ್ಯಜಿಸಿಬಿಟ್ಟಿದ್ದನು; ಆದರೆ ಖಚಿತವಾಗಿ ದೇವರು ಮಾತ್ರ ಹಾಗೆ ಮಾಡಿರಲಿಲ್ಲ. ಆತನು ಆಹಾಬನಿಗೆ ಅನೇಕ ಅವಕಾಶಗಳನ್ನು ಕೊಟ್ಟಿದ್ದನು.

ಅಧ್ಯಾಯ 20ರಲ್ಲಿ ದೇವರ ಇಸ್ರಾಯೇಲ್ಯರು ಭಯಪಡುತ್ತಿದ್ದ ಉತ್ತರದ ವೈರಿಯಾದ ಸಿರಿಯಾದ ಮೇಲಿನ ಎರಡು ಮೂಲ ಯುದ್ಧಗಳಲ್ಲಿ ಆಹಾಬ ಮತ್ತು ಇಸ್ರಾಯೇಲ್ಯರ ಜೊತೆ ಜಯಗಳಿಸುವದರಲ್ಲಿ ಕೆಲಸಮಾಡಿದನು. ಇದನ್ನು ಮಾಡಲು ದೇವರಿಗೆ ಅನೇಕ ಕಾರಣಗಳಿದ್ದವು. ಇದರ ಮೂಲಕವೇ ಮೆಸ್ಸೀಯನು ಬರಬೇಕಾದಂತದ್ದಾಗಿದ್ದರಿಂದ ಬಹುಶಃ ತನ್ನ ಒಡಂಬಡಿಕೆಯ ಜನರನ್ನು ರಕ್ಷಿಸುವ ಕಾಳಜಿಯೂ ಇರಬಹುದು. ಒಂದು ವೇಳೆ ಸಿರಿಯಾವು ಇಸ್ರಾಯೇಲನ್ನು ನಾಶಮಾಡಿದರೆ, ಇದು ಯುದಾಯದ ದಕ್ಷಿಣ ಭಾಗವನ್ನು ಗಂಡಾಂತರದಲ್ಲಿ ಇರಿಸುತ್ತಿತ್ತು. ದೇವರು ಮಧ್ಯಸ್ಥಿಕೆ ವಹಿಸುವುದಕ್ಕೆ1 ಅರಸು 20ರಲ್ಲಿ ಒಂದೇ ಒಂದು ಕಾರಣವನ್ನು ಕೊಡಲ್ಪಟ್ಟಿದೆ. ಇದು ವಚನ 13 ಮತ್ತು 28ರಲ್ಲಿ ಉಕ್ತವಾಗಿದೆ.

> ... ಪ್ರವಾದಿಯು ಇಸ್ರಾಯೇಲ್ಯರ ಅರಸನಾದ ಆಹಾಬನ ಬಳಿಗೆ ಬಂದು ಅವನಿಗೆ - ಈ ಮಹಾ ಸಮೂಹವನ್ನು ನೋಡಿದಿಯಾ; "*ನಾನು ಯೆಹೋವನೇ ಎಂಬುದು ನಿನಗೆ ಗೊತ್ತಾಗುವಂತೆ* ಈ ಹೊತ್ತೇ ಇವರನ್ನೆಲ್ಲಾ ನಿನ್ನ ಕೈಗೆ ಒಪ್ಪಿಸುವನು ಎಂಬುದಾಗಿ ಯೆಹೋವನು ಅನ್ನುತ್ತಾನೆ."

> ... ಆಗ ದೇವರ ಮನುಷ್ಯನು ಇಸ್ರಾಯೇಲ್ಯರ ಅರಸನ ಬಳಿಗೆ ಬಂದು ಅವನಿಗೆ - ಯೆಹೋವನು ಹೀಗನ್ನುತ್ತಾನೆ ಯೆಹೋವನು ... ದೇವರಾಗಿರುತ್ತಾನೆ. ಅಂದುಕೊಂಡು ಬಂದಿರುವ ಈ ಅರಾಮ್ಯರ ಮಹಾ ಸಮೂಹವನ್ನು ನಿನ್ನ ಕೈಗೆ ಒಪ್ಪಿಸುವೆನು ಇದರಿಂದ *ನಾನು ಯೆಹೋವನೇ ಎಂದು ನಿನಗೆ ಗೊತ್ತಾಗುವದು.* (ಒತ್ತಿ ಹೇಳಿದ್ದು ನನ್ನದು.)

ದೇವರು ಹೇಳುತ್ತಾನೆ, "ಬಾಳನಾಗಲಿ ಅಥವಾ ಅಶೇರನಾಗಲಿ ದೇವರಲ್ಲ ಎಂದು ನೀನು ತಿಳಿದುಕೋ ಬದಲಾಗಿ ನಾನೇ ದೇವರಾಗಿದ್ದೇನೆ, ನಿಜವಾದ ದೇವರು ಮತ್ತು ಒಬ್ಬನೇ ದೇವರಾಗಿದ್ದೇನೆ" ಎಂದು. ದೇವರು ಕ್ರಿಯಾಶೀಲನಾಗಿರಲಿಲ್ಲ ಯಾಕೆಂದರೆ ಆಹಾಬ ಅಥವಾ ಇಸ್ರಾಯೇಲರು ಇದಕ್ಕೆ ಯೋಗ್ಯರಾಗಿದ್ದರು, ಮತ್ತು ಇದರ ಮೂಲಕ ತನ್ನ ಶಕ್ತಿಯನ್ನು ಅವರಿಗೆ ತೋರಿಸಿಕೊಡಲು. ತಾನೇ ದೇವರು ಎಂದು ತೋರಿಸಿ ಕೊಡಲು ಆಹಾಬ ಮತ್ತು ಇಸ್ರಾಯೇಲರಿಗೆ ದೇವರು ಇನ್ನೊಂದು ಅವಕಾಶವನ್ನು ಕೊಡುತ್ತಿದ್ದಾನೆ.

ನಾವು "ಅದ್ಭುತವಾದ ಕೃಪೆ" ಎಂಬ ಹಾಡನ್ನು ಹಾಡುತ್ತೇವೆ. ಈ ಅಧ್ಯಾಯವು ದೇವರ ಕೃಪೆಯ ಅದ್ಭುತವಾದ ಸ್ವಭಾವವನ್ನು ಪ್ರದರ್ಶಿಸುವುದಾಗಿದೆ. ನಮ್ಮ ದೇವರು ದೀರ್ಘ ಶಾಂತಿವುಳ್ಳ (ಬಲು ತಾಳ್ಮೆಯುಳ್ಳ) ದೇವರಾಗಿದ್ದಾನೆ. ಪೇತ್ರ "ದೇವರು, ... ನಿಮ್ಮ ವಿಷಯದಲ್ಲಿ ದೀರ್ಘಶಾಂತಿಯುಳ್ಳವನಾಗಿದ್ದಾನೆ" (2 ಪೇತ್ರ 3:9) ಎಂದಿದ್ದಾನೆ. ಈ ಅಧ್ಯಾಯವು ದೇವರು ಎಷ್ಟು ತಾಳ್ಮೆಯುಳ್ಳವನೂ ದೀರ್ಘಶಾಂತನೂ ಎಂಬುದನ್ನು ತೋರಿಸುವುದಾಗಿದೆ.

## ಆಹಾಬನ ಮೊದಲನೆಯ ಅವಕಾಶ (20:1-21)

ವಚನ 1 ರಿಂದ 21ರಲ್ಲಿ, ನಿಜದೇವರನ್ನು ಅರಿತುಕೊಳ್ಳುವಂತಹ ಆಹಾಬನ ಮೊದಲನೆಯ ಅವಕಾಶವನ್ನು ಈ ಅಧ್ಯಯದಲ್ಲಿ ನೋಡಿದೆವು (ಆತನಿಗೆ ಇದಕ್ಕಿಂತ ಮುಂಚೆ ಅವಕಾಶಗಳು ಇದ್ದವು).

ವಚನ 1 ರಿಂದ 12 ರಲ್ಲಿ ಸಿರಿಯಾದ ರಾಜನಾದ ಬೆನ್ಹದದನು, ಇಸ್ರಾಯೇಲ್ಯರನ್ನು ನಾಶಪಡಿಸಲು ಹೇಗೆ ಸಿದ್ಧಪಡಿಸಿಕೊಂಡನು ಎಂಬುದನ್ನು ವರ್ಣಿಸಿದೆ. "ಆರಾಮ್ಯರ [ಅಥವಾ ಸಿರಿಯಾ] ಅರಸನಾದ ಬೆನ್ಹದದನು[1] ತನ್ನ ಎಲ್ಲಾ ಸೈನ್ಯವನ್ನು ಕೂಡಿಸಿಕೊಂಡು ರಥಾಶ್ವಬಲಗಳಿಂದ ಕೂಡಿದ ಮೂವತ್ತೆರಡು ಮಂದಿ ಅರಸರೊಡನೆ[2] ಹೊರಟನು" (ವಚನ 1ಎ). ಸಿರಿಯದ ಅರಸನು ಮೂವತ್ತೆರಡು ರಾಜಕೀಯ ಮಿತ್ರರಾಷ್ಟ್ರಗಳೊಡನೆ ಒಕ್ಕೂಟವನ್ನು ರಚಿಸಿ ಇಸ್ರಾಯೇಲ್ಯರ ವಿರುದ್ಧ ಹೋರಾಡಿದನು. "ಮತ್ತು ಆತನು ಹೊರಟು ಬಂದು ಸಮಾರ್ಯಪಟ್ಟಣಕ್ಕೆ ಮುತ್ತಿಗೆ ಹಾಕಿ ಯುದ್ಧಮಾಡಿದನು" (ವಚನ 1ಬಿ). ಸಮಾರ್ಯದ ಮುತ್ತಿಗೆಯು ಎಲ್ಲಿಯವರೆಗೆ ಅಂತ್ಯವಾಯಿತು ಎಂದು ನಮಗೆ ಹೇಳಿಲ್ಲ, ಆದರೆ ಇದು ಸಿರಿಯಾಕ್ಕೆ "ತಾತ್ಕಾಲಿಕ ಡೇರೆಗಳನ್ನು" ಕಟ್ಟಿಕೊಳ್ಳಲು ಬಹಳ ದಿನ ಹಿಡಿಯಿತು (ವಚನಗಳು 12, 16) ಮತ್ತು ಆಹಾಬನು ಅದನ್ನು ಒಪ್ಪಿಕೊಳ್ಳುವಂತೆ ಮಾಡಿತು.

ಬೆನ್ಹದದನು ತಿರುಗಿ ಸಮಾರ್ಯವನ್ನು ಎಲ್ಲೆಡೆಯಿಂದ ಮುತ್ತಿಗೆ ಹಾಕಿದಾಗ ಇಂಥ ಶರತ್ತುಗಳಲ್ಲಿ ಏನು ಒಳಗೊಂಡಿದ್ದವು[3] ಎಂಬ ವಿಚಾರವನ್ನು ಪಡೆಯುವುದಕ್ಕಾಗಿ 2 ಅರಸು 6:24-30ರತ್ತ ಗಮನಹರಿಸುವಾ. ಹಸಿವೆಯನ್ನು ತಡೆಯಲು ಜನರು ಅಸಹ್ಯಕರವಾದ ಸಂಗತಿಗಳನ್ನು ತಿಂದರು. ತಾಯಂದಿರು ತಮ್ಮ ಸ್ವಂತ ಮಕ್ಕಳನ್ನು ತಿಂದರು!

ನಂತರ ಬೆನ್ಹದದನು ತನ್ನ ದೂತನನ್ನು ಆಹಾಬನ ಹತ್ತಿರ ಕಳುಹಿಸಿ, "ನಿನ್ನ

ಬೆಳ್ಳಿಬಂಗಾರಗಳು ನನ್ನದು; ನಿನ್ನ ಪ್ರೀಯ ಸತಿಸುತರು ನನ್ನವರೇ ಎಂದು ತಿಳಿದಕೋ'' ಎಂದು ಹೇಳಿಕಳುಹಿಸಿದನು (ವಚನಗಳು 2, 3).

ಬೆನ್ಹದದನು ಇಸ್ರಾಯೇಲರ ಬಗೆಗೆ ಬಲು ದ್ವೇಷದಿಂದ ತುಂಬಿದವನಾಗಿರಬಹುದು. ಆತನು ಈ ವಿಜಯದಿಂದ ತೃಪ್ತನಾಗಿರಲಿಲ್ಲ. ''ಹೊಲಸನ್ನು ತಿನ್ನುವಂತಹ'' ಪೀಡಿಸುವಂತೆ ಮಾಡುವ ಆತನ ದುರ್ಬಲಗೊಳಿಸುವ ವಿಜಯದಂತವುಗಳಿಂದ, ಬೆನ್ಹದದನು ಆಹಾಬನನ್ನು ಮತ್ತು ಇಸ್ರಾಯೇಲರನ್ನು ನಾಚಿಕೆಗೇಡುಮಾಡಲು ಬಯಸಿದ್ದನು. ''ನನಗೆ ನಿನ್ನ ಬೆಳ್ಳಿಬಂಗಾರಗಳು ಬೇಕು'' ಎಂದಲ್ಲದೇ. ''ನನಗೆ ನಿನ್ನ ಪ್ರೀಯ ಸತಿಸುತರು ಬೇಕು'' ಎಂದು ಆತನು ಹೇಳಿದನು. ರಾಜನ ಸ್ತ್ರೀಯರಿರುವ ಸ್ಥಾನವನ್ನು ಒಪ್ಪಿಸುವದು ಆತನ ಮುಕುಟವನ್ನು, ಆತನ ಪುರುಷತ್ವವನ್ನು, ಮತ್ತು ಸ್ವಪ್ರತಿಷ್ಟೆಯನ್ನೂ ಒಪ್ಪಿಸಿದಂತೆ. ತನ್ನ ಮನತನವನ್ನು ಉಳಿಸಿಕೊಳ್ಳದ ಅರಸನು ಸಾಯಲು ಯೋಗ್ಯನಾಗಿರುವವನಾಗಿರುತ್ತಾನೆ.

ಅವಹೇಳನದ ಬೇಡಿಕೆಗೆ ಆಹಾಬನ ಉತ್ತರವು ಏನಾಗಿತ್ತು? ನಡುಕ ಮತ್ತು ಕಂಪನದ ಜೊತೆ ಭಯದಿಂದ ''ನನ್ನ ಒಡೆಯನಾದ ಅರಸನೇ, ನೀನು ಹೇಳಿದಂತೆ ನಾನು ನಿನ್ನವನೇ; ನನಗಿರುವುದೆಲ್ಲವೂ ನಿನ್ನದೇ''[4] ಈ ರೀತಿಯ ಹೇಳುವುದರ ಮೂಲಕ ಆಹಾಬನು ಆ ಶರತ್ತಿಗೆ ಒಪ್ಪಿದನು (ವಚನ 4).[5] ಆಹಾಬನ ಹೆಂಡತಿಯರಲ್ಲಿ ಈಜಬೇಲಳು ಮುಖ್ಯಳಾಗಿದ್ದಳು! ಆಹಾಬನ ಈ ನಿರ್ಧಾರ ಆಕೆಗೆ ಹೇಗೆ ಅನ್ನಿಸಿರಬಹುದು ಮತ್ತು ಆಕೆ ಎಷ್ಟು ಅಸಂತುಷ್ಟಳಾಗಿರಬಹುದು!

ಶರತ್ತು ಮುಂದಿಡಲ್ಪಟ್ಟಿದೆ, ಮತ್ತು ಅದು ಅಂಗೀಕೃತವೂ ಆಗಿದೆ, ಅದು ಸಂಗತಿಗಳನ್ನು ಸರಿಮಾಡುವಂತದ್ದಾಗಿದೆ. ಬೆನ್ಹದದನು ತನ್ನ ಈ ಪ್ರಯತ್ನಗಳ ಮೂಲಕ ಆಹಾಬನನ್ನು ಕಂಗೆಡಿಸುವವನಾಗಿರಲಿಲ್ಲ. ಆತನು ಆಹಾಬನು ಸಾಕಷ್ಟು ಹೊಲಸನ್ನು ತಿಂದಿಲ್ಲ ಎಂದು ನಿರ್ಧರಿಸಿದನು. ಆತನು ತನ್ನ ಶರತ್ತನ್ನು ಬದಲಾಯಿಸಿದನು:

> ಆ ದೂತರು ತಿರುಗಿ ಆಹಾಬನ ಬಳಿಗೆ ಬಂದು, ಅವನಿಗೆ - ನಿನ್ನ ಬೆಳ್ಳಿಬಂಗಾರವನ್ನು ಸತಿಸುತರನ್ನೂ ನನಗೆ ಒಪ್ಪಿಸಬೇಕೆಂದು ನಿನಗೆ ಹೇಳಿ ಕಳುಹಿಸಿದೆನಲ್ಲಾ. ನಾಳೆ ಇಷ್ಟು ಹೊತ್ತಿಗೆ ನನ್ನ ಆಳುಗಳನ್ನು ಕಳುಹಿಸುವೆನು; ಅವರು ನಿನ್ನ ಮತ್ತು ನಿನ್ನ ಸೇವಕರ ಮನೆಗಳನ್ನು ಶೋಧಿಸಿ ನಿಮಗೆ ಇಷ್ಟವಾಗಿರುವವುಗಳನ್ನೆಲ್ಲಾ ತೆಗೆದುಕೊಳ್ಳುವರು (ವಚನಗಳು 5, 6).

ಇದಕ್ಕೆ ಉತ್ತರವಾಗಿ ಬೆನ್ಹದದನು, ''ನಾನು ಕೇಳಿದವುಗಳನ್ನು ನೀನು ಕಳುಹಿಸುತ್ತೀ ಎಂಬುದರಲ್ಲಿ ನನಗೆ ನಂಬಿಕೆಯಿಲ್ಲ, ಆದಕಾರಣ ನಾನು ನನ್ನ ಸೇವಕರನ್ನು ಕಳುಹಿಸಿಸುವೆನು. ಅವರು ಕೇವಲ ರಾಜನ ಬೊಕ್ಕಸದಲ್ಲಿರುವ ಬೆಳ್ಳಿ ಬಂಗಾರಗಳನ್ನು ತೆಗೆದುಕೊಳ್ಳುವುದಿಲ್ಲ ಅವರು ಪಟ್ಟಣದ ಪ್ರತಿಯೊಂದು ಮನೆಯನ್ನೂ ಹುಡುಕುವರು ಮತ್ತು ತಮಗೆ ಇಷ್ಟವುಳ್ಳದ್ದನ್ನು ತೆಗೆದುಕೊಳ್ಳುವರು'' ಎಂದು ಹೇಳಿದನು. ಇಡೀ ಪಟ್ಟಣವು ಕೊಳ್ಳೆಹೊಡೆಯಲ್ಪಡುತ್ತದೆ.

ಆಹಾಬನು ನಂತರ ಬೆನ್ಹದದನವನಿಗೆ ಎದುರಾಗಿ ನಿಂತನೇ? ನಿಜವಾಗಿಯೂ ಇಲ್ಲ. ಬದಲಾಗಿ ಆತನು ತನ್ನ ಸಲಹೆಗಾರರನ್ನು ಕರೆಯಿಸಿದನು ಮತ್ತು ಅವರ ಹೆಗಲ ಮೇಲೆ ರೋಧಿಸಿದನು:

> ಆಗ ಇಸ್ರಾಯೇಲ್ಯರ ಅರಸನಾದ ಆಹಾಬನು ದೇಶದ ಎಲ್ಲಾ ಹಿರಿಯರನ್ನು ಕರೆಯಿಸಿ ಅವರಿಗೆ ನೋಡಿದಿರಾ ಅವನು ನಮಗೆ ಕೇಡನ್ನು ಬಗೆಯುತ್ತಾನೆ; ನಿನ್ನ ಬೆಳ್ಳಿಬಂಗಾರವನ್ನೂ ಸತಿಸುತರನ್ನೂ ನನಗೆ ಕೊಡು ಎಂದು ಅವನು ಹೇಳಿ ಕಳುಹಿಸಿದಕ್ಕೆ ನಾನು ಒಪ್ಪಿದರೂ ಅವನಿಗೆ ತೃಪ್ತಿಯಾಗಲಿಲ್ಲ (ವಚನ 7).

ಆಹಾಬನು ತನ್ನ ನಾಚಿಕೆಗೇಡುತನವನ್ನು ಘೋಶಿಸಿದನು, ತನ್ನ ಮಕ್ಕಳನ್ನೂ ಮತ್ತು

ಉಪಪತ್ನಿಯರನ್ನೂ ಯಾವುದೇ ಹೋರಾಟವಿಲ್ಲದೆ ಒಪ್ಪಿಸುವುದಾಗಿ ಸಮ್ಮತಿಸಿದ್ದನ್ನು ಅವರ ಮುಂದೆ ಒಪ್ಪಿಕೊಳ್ಳುತ್ತಾನೆ. ಆತನ ಸೂಚಿತವಾದ ಆಳುವು "ನಾನು ಈಗ ಏನು ಮಾಡ ಬೇಕು?" ಎಂದು ಕೇಳುವಂತಿತ್ತು. ಹಿರಿಯರು ಮತ್ತು ಇತರರು ಅಲ್ಲಿ ಸೇರಿದಾಗ ಒಬ್ಬರು ಧೈರ್ಯವನ್ನು ತೋರಿದರು. ಅವರು ಪ್ರತಿಕ್ರಿಯಿಸಿದರು, "ಎಲ್ಲಾ ಜನರು ಈ ಮಾತಿಗೆ ಒಪ್ಪಬೇಡ ಎಂದರು" (ವಚನ 8). ಆದುದರಿಂದ ಅವರು (ಆಹಾಬನು) ಬಂದಂಥ ದೂತರ ಮುಖಾಂತರವಾಗಿ (ವಚನ 9) ತನ್ನ ನಿರಾಕರಣೆಯನ್ನು ತಿಳಿಸಿದನು.

ಬೆನ್ಹದದನು ಕೋಪೋದ್ರೇಕಗೊಂಡನು. ಆತನು ಇಸ್ರಾಯೇಲ್ಯರ ಹೃದಯದಲ್ಲಿ ಭಯವು ಹುಟ್ಟಿಸುವಂತ ಆರ್ಭಟವನ್ನು ತುಂಬಿದ ಸಂದೇಶವನ್ನು ರಚಿಸಿ ಕಳುಹಿಸಿದನು: "ಸಮಾರ್ಯಪಟ್ಟಣದ ನಾಶನದಿಂದುಂಟಾಗುವ ಧೂಳು ಲೆಕ್ಕವಿಲ್ಲದ ನನ್ನ ಸೈನಿಕರ ಹಿಡಿ ತುಂಬುವಷ್ಟಿದ್ದರೆ ದೇವತೆಗಳು ನನಗೆ ಬೇಕಾದದ್ದನ್ನು ಮಾಡಲಿ" (ವಚನ 10). "ನಾನು ಈ ಪಟ್ಟಣವನ್ನು ಉಳಿಸಬೇಕೆಂದಿದ್ದೆ, ಆದರೆ ಈಗಿಲ್ಲ" ಎಂದು ಆತನು ಹೇಳಿದನು. "ನಾನು ಸಮಾರ್ಯವನ್ನು ಧೂಳಿನಂತೆ ಮಾಡುವೆನು! ಆಗ ನನ್ನ ಸೈನಿಕರು ಧೂಳನ್ನು ಕೊಂಡೊಯ್ಯುವರು ಅಲ್ಲಿ ಏನೂ ಉಳಿಯದು!"[6]

ಆಹಾಬನು ತನ್ನದೇ ಆದ ಗಾದೆಮಾತಿನಲ್ಲಿ ಉತ್ತರಿಸುತ್ತಾನೆ: "ಯುದ್ಧಕ್ಕಾಗಿ ನಡುಕಟ್ಟನ್ನು ಬಿಗಿದುಕೊಳ್ಳುವವನು ಅದನ್ನು ಬಿಚ್ಚಿಡುವ ಜಯಶಾಲಿಯಂತೆ ಹೆಚ್ಚಳ ಪಡಬಾರದು" (ವಚನ 11).[7] ಆಹಾಬನು ಜಂಬಕೊಚ್ಚಿಕೊಳ್ಳುವ ಸಮಯವು ಯುದ್ಧದ ನಂತರ, "ಮುಂಚೆ ಅಲ್ಲ - ಆದಕಾರಣ ಯುದ್ಧದ ನಂತರದಲ್ಲಿ ನೀನು ನಿನ್ನ ಬಾಣಕ್ಕೆ ವಿಶ್ರಾಂತಿಕೊಡುವ ತನಕ ಕಾಯದೆ ಮುಂಚೆಯೆ ನೀನು ಮಾತನಾಡಿದರೆ ಅದು ಬಲು ಗರ್ವದ್ದಾಗಿರುವದು" ಎಂದು ಹೇಳಿದನು. ಇದು "ನಿನ್ನ ಕೋಳಿಗಳನ್ನು ಅವುಗಳು ಮರಿಮಾಡುವ ಮೊದಲೇ ಎಣಿಸದಿರು" ಎಂಬ ಗಾದೆಮಾತಿನ ಅರ್ಥಕ್ಕೆ ಇದು ಸಮಾನವಾಗಿದೆ.[8] (ಬೆನ್ಹದದ ಮತ್ತು ಆಹಾಬ ಚಿಕ್ಕಮಕ್ಕಳಂತೆ ಒಬ್ಬರನ್ನೊಬ್ಬರು ಕೆಣಕುವಂತೆ ಮಾತನಾಡುತ್ತಿದ್ದರು: "ನಿನ್ನ ಅಜ್ಜಿ ಸೈನಿಕರ ಬೂಟುಗಳನ್ನು ಧರಿಸಿದ್ದಳು !"; "ನಿನ್ನ ಅಜ್ಜನು ತನ್ನ ಕಾಲುಗಳ ಮೇಲೆ ಹೊದಿಕೆಯ ಹೊರಗೆ ಮಲಗುತ್ತಾನೆ!")

> ... ತನ್ನ ಅರಸುಗಳ ಸಂಗಡ ಡೇರೆಗಳಲ್ಲಿ ಮಧ್ಯಪಾನ ಮಾಡುತ್ತಿದ್ದ ಬೆನ್ಹದದನು ಈ ಸಂಗತಿಯನ್ನು ಕೇಳಿದಕೂಡಲೆ,[9] ... ಪಟ್ಟಣಕ್ಕೆ ಲಗ್ಗೆಯಿಡುವಂತೆ ಸೈನಿಕರಿಗೆ ಆಜ್ಞಾಪಿಸಿದನು. ಅವರು ಹಾಗೆಯೆ ಮಾಡಿದರು (ವಚನ 12).

ಈ ಸಂಗತಿಯಲ್ಲಿ ದೇವರು ಮಧ್ಯ ಪ್ರವೇಶಿಸಿದನು ಮತ್ತು ಆಹಾಬನಿಗೆ ಮತ್ತೊಂದು ಅವಕಾಶವನ್ನು ಕೊಟ್ಟನು. "ಆಗ ಒಬ್ಬ ಪ್ರವಾದಿಯು ಇಸ್ರಾಯೇಲ್ಯರ ಅರಸನಾದ ಆಹಾಬನ ಬಳಿಗೆ ಬಂದನು ..." (ವಚನ 13ಎ). ಈ ಪ್ರವಾದಿಯು ಯಾರು? ಎಂಬುದು ನಮಗೆ ತಿಳಿಯದು. ಈ ಅಧ್ಯಾಯದಲ್ಲಿ ನಾವು ನಾಲ್ಕು ಸಾರಿ ಒಬ್ಬ ಪ್ರವಾದಿಯು ಅರಸನ ಬಳಿಗೆ ಬರುವುದನ್ನು ನೋಡುತ್ತೇವೆ (ವಚನಗಳು 13, 22, 28, 35). ದೇವರ ಸಂದೇಶ ವಾಹಕನನ್ನು ವರ್ಣಿಸಲು ಮೂರು ವಿಭಿನ್ನ ಪದಗಳು ಬಳಕೆಯಾಗಿವೆ, ಬಹುಶಃ ಈ ಅಧ್ಯಾಯದಲ್ಲಿ ಮೂರು ಜನರಿದ್ದರೂ ವಿಭಿನ್ನ ಪ್ರವಾದಿಗಳು ಆಹಾಬ ಜೊತೆ ವ್ಯವಹರಿಸಲು ದೇವರಿಂದ ಉಪಯೋಗಿಸಲ್ಪಟ್ಟರು. ಹಾಗಿದ್ದದ್ದಾದರೆ ಅವರು ಎಲ್ಲಿಂದ ಬಂದರು? ಕಡೆಯ ಎರಡು ಅಧ್ಯಾಯದಲ್ಲಿ ಎಲೀಯನು ತಾನು ಒಬ್ಬನೇ ಇದ್ದೇನೆ ಎಂದು ಒತ್ತಿ ಹೇಳಿದ್ದನು (1 ಅರಸು 18:22; 19:10, 14). ಬಹುಶಃ ಎಲೀಯನು ಕರ್ಮೆಲ್ ಬೆಟ್ಟದಲ್ಲಿ ತೋರಿದ ಧೈರ್ಯದಾಯಕ ನಿಲುವುಇತರ ಪ್ರವಾದಿಗಳ ಧೈರ್ಯವು ಹೊರಸೂಸುವಂತೆ ಮಾಡಿತು - ಬಹುಶ ದೂರದಲ್ಲಿ ಅಡಗಿರುವಂತವರು ಈಗ ಈ ದೇಶದಲ್ಲಿನ ದುಷ್ಟತನದ ವಿರುದ್ಧ ನಿಲ್ಲಲು ಸಿದ್ಧರಾಗಿರಬಹುದು. ಇನ್ನೊಂದು ಮಾತಿನಲ್ಲಿ ಎಲೀಯನು ತಾನು ಬಯಸಿದಂತೆ ರಾಷ್ಟ್ರವನ್ನು

ಕರ್ತನೆಡೆಗೆ ತಿರುಗಿಸಲಿಕ್ಕಾಗಿರಲಿಕ್ಕಿಲ್ಲ, ಆದರೆ ಆತನು ತನ್ನ ಕೃತಿಗಳ ಮೂಲಕ ಇತರರನ್ನು ಸ್ಫೂರ್ತಿಗೊಳಿಸುವುದರಲ್ಲಿ ಆತನು ಯಶಸ್ವಿಯಾದನು!

ನಾವು ಏನನ್ನು ಸಾಧಿಸ ಬೇಕೆಂದಿರುತ್ತೇವೆಯೋ ಅದು ಪೂರ್ಣವಾಗದಾದಗ ನಾನು ಯಾವಾಗಲೂ ನಿರಾಶೆಗೊಳಗಾಗುತ್ತೇವೆ. ಒಂದು ವೇಳೆ ನಾವು ಅದನ್ನು ಕರ್ತನ ಚಿತ್ತದಂತೆ ಮಾಡಿರುತ್ತಿರುವುದಾದರೆ, ನಾವು ಇಚ್ಛಿಸಿದ ಪರಿಣಾಮವು ಬರದೇ ಹೋದರೆ ಅಂದರೆ ನಾವು ಏನನ್ನೂ ಸಾಧಿಸಿಲ್ಲ ಎಂದರ್ಥವಲ್ಲ ಎಂಬುದನ್ನು ನಾವು ಅರಿತುಕೊಳ್ಳಬೇಕು. ಹೇಗೋ, ದೇವರು ನಮ್ಮ ಪ್ರಯತ್ನಗಳನ್ನು ಸಕಾಲದಲ್ಲಿ ಫಲಿಸುವವನಾಗಿದ್ದಾನೆ.

ಪ್ರವಾದಿಯು ಆಹಾಬನಿಗೆ ಕಾಣಿಸಿಕೊಂಡು, "ಈ ಮಹಾಸಮೂಹವನ್ನು ನೋಡಿ ದಿಯಾ ಎಂಬುದಾಗಿ ಯೆಹೋವನು ಅನ್ನುತ್ತಾನೆ?" (ವಚನ 13ಎ). ಎಂದು ಹೇಳಿದನು. ಈ ಪ್ರಶ್ನೆಯಲ್ಲಿ ವ್ಯಂಗ್ಯಕರವಾದ ಹಾಸ್ಯವು ಇದೆ. ಆಹಾಬನು ಅವರನ್ನು ನೋಡಿದರಿಂದ ತಪ್ಪಿಸಿಕೊಳ್ಳಲು ಹೇಗೆ ಸಾಧ್ಯ? ಆತನು ಯಾವುದೇ ದಿಕ್ಕಿನಲ್ಲಿ ನೋಡಲಿ, ಅವರು ಆತನು ದೃಷ್ಟಿಹರಿಸಿದೆಲ್ಲೆಲ್ಲಾ ಹರಡಿಕೊಂಡಿದ್ದನು! ದೇವರ ಸಂದೇಶವು ನಂತರದಲ್ಲಿ ಆತನ ಉದ್ದೇಶ ವನ್ನು ವಿವರಿಸಿತು: "ನಾನು ಯೆಹೋವನು ಎಂಬುದು ನಿನಗೆ ಗೊತ್ತಾಗುವಂತೆ ಈ ಹೊತ್ತು ಇವರನ್ನೆಲ್ಲಾ ನಿನ್ನ ಕೈಗೆ ಒಪ್ಪಿಸುವೆನು" (ವಚನ 13ಬಿ). ಬಾಳನು ಅವರನ್ನು ರಕ್ಷಿಸುವುದರಲ್ಲಿ ವಿಫಲನಾಗಿದ್ದನು. ಆಕ್ರಮಣವು ಆರಂಭವಾದಾಗಿನಿಂದ ಸಾವಿರಾರು ಬಲಿಗಳು ಬಾಳ ಮತ್ತು ಅಶೇರರಿಗೆ ಒಪ್ಪಿಸಲ್ಪಟ್ಟಿದ್ದವು! ಈ ಬಲಿಗಳು ಅವರಿಗೆ ಸಹಾಯ ಮಾಡಲಿಲ್ಲ; ನಿರಾಶೆಯು ಅಲ್ಲಿ ತುಂಬಿಕೊಂಡಿತ್ತು. ದೇವರು ಆತನಿಗೆ, "ನೀನು ಹಿಂದೆ ಸರಿ ಮತ್ತು ನಾನು ಏನು ಮಾಡು ತ್ತೇನೆ ಎಂಬುದನ್ನು ನಾನು ನಿನಗೆ ತೋರಿಸುತ್ತೇನೆ. ಯಾರು ನಿಜವಾದ ದೇವರೆಂದು ನಿನಗೆ ಗೊತ್ತಾಗುವದು!" ಅಂದನು.

ಆಹಾಬನು ಅವನನ್ನು "ಇದು ಯಾರ ಮುಖಾಂತರವಾಗಿ ಆಗುವದು" (ವಚನ 14ಅ) ಎಂದು ಕೇಳಿದನು. "ಯಾರಿಂದ ನೀನು ನಮ್ಮನ್ನು ಬಿಡುಗಡೆ ಮಾಡುತ್ತಿ?" ಆಹಾಬನು ಆಶ್ಚರ್ಯಚಕಿತನಾಗಿ, "ನೀನು ಪ್ರಜ್ಞಾಸೈನ್ಯವನ್ನು ಕರೆಯುವಿಯಾ? ಬೆಂಕಿಯ ಕತ್ತಿಯ ದೇವದೂತರ ಸೈನ್ಯವನ್ನು ನೀನು ಕಳುಹಿಸುವೆಯಾ? ನಮ್ಮ ಪಟ್ಟಣವನ್ನು ಮುತ್ತಿಗೆ ಹಾಕಿರುವ ಬಲವಾದ ಸೈನ್ಯಕ್ಕೆ ಪ್ರತಿಯಾಗಿ ನಮ್ಮನ್ನು ರಕ್ಷಿಸಲು ಸಮರ್ಥವಿರುವ ಯಾವ ತರದ ಬಲದಳವನ್ನು ನೀನು ಒದಗಿಸಬಹುದು?"

ಪ್ರವಾದಿಯು ದೇವರ ಪ್ರತ್ಯುತ್ತರವನ್ನು ಹೇಳಿದನು, "ಪ್ರದೇಶಾಧಿಪತಿಗಳ ಸೇವಕರ ಮುಖಾಂತರವಾಗಿ ಆಗುವದು" (ವಚನ 14ಬಿ). ಇವರು ಬಹುಶಃ ಇಸ್ರಾಯೇಲಿನ ಅರಸರಿಂದ ವಿಭಿನ್ನ ಕಾರ್ಯಗಳಿಗಾಗಿ ಕಾಯ್ದಿಡಲ್ಪಟ್ಟ ಯೌವನಸ್ಥರಾಗಿರಬಹುದು, ಇವರು ಯುದ್ಧ ಪ್ರವೀಣರಾಗಿರಲಿಲ್ಲ, ಹೋರಾಟಕ್ಕೆ ಅವರು ಕೌಶಲ್ಯಗಳು ಸಾಣೆಕಲ್ಲಿನಂತೆ ಎದುರಿಸಲು ಅಲ್ಲ, ಆದರೆ ಅವರು ಮನೆಯ ಸೇರೆಗಾಗಿ ಇತ್ತು. ಮುಂದಿನ ವಚನವು ಈ ಯೌವನಸ್ಥರು 232 ಸಂಖ್ಯೆಯಲ್ಲಿದ್ದರು ಎಂದು ತಿಳಿಸುತ್ತದೆ. ಜಯವನ್ನು ಸಾಧಿಸಲು ದೇವರಿಗೆ ದೊಡ್ಡ ಸಂಖ್ಯೆಯ ಅವಶ್ಯಕತೆಯು ಇರಲಿಲ್ಲ. ದೇವರು ಗಿಧ್ಯೋನನಿಗೆ ಹೇಳಿದಂತೆ, ಆಹಾಬನಿಗೂ ಸಹ ಯುದ್ಧದಲ್ಲಿ ಕೌಶಲ್ಯಗಳಿಂದ ಕೂಡಿದ ಜನರಿಂದ ಗೆಲವು ಸಾಧಿಸಲಾಗದು, ಆದರೆ ಆತನ ಶಕ್ತಿಯಿಂದಲೇ ಎಂಬುದನ್ನು ತಿಳಿಯಬೇಕೆಂದು ಹೀಗೆ ಮಾಡಿದನು (ನೋಡಿರಿ ನ್ಯಾಯಸ್ಥಾಪಕರು 7:2; 1 ಕೊರಿಂಥ 1:27, 29).

ನಂತರ ಆಹಾಬನು "ಯುದ್ಧ ಪ್ರಾರಂಭಮಾಡತಕ್ಕವರು ಯಾರು?" (ವಚನ 14ಸಿ) ಎಂದು ಕೇಳಿದನು. "ಯಾರು ಮಧ್ಯಸ್ಥಿಕೆಯನ್ನು ವಹಿಸುವರು?" ಆಹಾಬನಿಗೆ ಆಶ್ಚರ್ಯವಾ ಗುವಂತೆ ದೇವ ಮನುಷ್ಯನು ಉತ್ತರಿಸಿದನು "ನೀನು" (ವಚನ 14ಡಿ)!

7,000 ಜನರ ಒಂದು ಚಿಕ್ಕ ಸೈನ್ಯವು 232 ಜನ ಯೌನಮಸ್ಥರಿಂದ ಯುದ್ಧಕ್ಕೆ ನಡೆಸಲ್ಪಟ್ಟಿತು (ವಚನ 15) ಈ 7,000 ಜನರು ಬಾಳನಿಗೆ ಅಡ್ಡಬೀಳದ ಜನರಾಗಿರಬಹುದೇ

(1 ಅರಸು 19:18)? ಬಹುಶಃ ನಮಗೆ ತಿಳಿಯದು.

ಪ್ರತಿಯೊಂದು ಸಿದ್ಧವಾದಾಗ, 232 ಸೇವಕರು ಸಮಾರ್ಯ ಪಟ್ಟಣದ ಮುಂದೆ ಹಾದುಹೋದರು. ಬಹುಶಃ ಇಲ್ಲದೇ ಅವರು ಸೈನಿಕರಂತೆಯೇ ಕಾಣುತ್ತಿದ್ದರು.

> ಮಧ್ಯಾಹ್ನದಲ್ಲಿ [ಇದು ಸಾಮಾನ್ಯವಾದ ತಿಂಡಿಯ ಮತ್ತು ವಿಶ್ರಾಂತಿಯ ಸಮಯ ವಾಗಿತ್ತು][10] ಬೆನ್ಹದದನು ತನ್ನ ಸಹಾಯಕ್ಕಾಗಿ ಬಂದ ಮೂವತ್ತೆರಡು ಮಂದಿ ಅರಸರ ಸಂಗಡ ಮಧ್ಯಪಾನಮಾಡಿ ಮತ್ತನಾಗಿ[11] ಡೇರೆಯಲ್ಲಿ ಕೂತುಕೊಂಡಿದ್ದಾಗ ಇವರು ಪಟ್ಟಣದಿಂದ ಹೊರಗೆ ಬಂದರು. ಪ್ರದೇಶಾಧಿಪತಿಗಳ ಆಳುಗಳು ಮೊದಲು ಬಂದರು (ವಚನಗಳು 16, 17ಎ).

ಬೆನ್ಹದದನಿಗೆ ಒಂದು ಚಿಕ್ಕ ಗುಂಪು ಅವರ ಡೇರೆಯನ್ನು ತಲುಪಿದೆ ಎಂಬ ಸುದ್ದಿಯು ಬಂದಿತು. "ಮತ್ತು ಬೆನ್ಹದದನು ಕಾವಲುಗಾರರನ್ನು ಹೊರಗೆ ಕಳುಹಿಸಿದನು" (ವಚನ 17ಬಿ, RSV). ಕಾವಲುಗಾರರು ತಿರುಗಿ ಬಂದು "ಸಮಾರ್ಯದ ಜನರು ಹೊರಗೆ ಬಂದಿರುತ್ತಾರೆ" ಎಂದು ತಿಳಿಸಿದರು (ವಚನ 17ಸಿ). ಮತ್ತನಾದ ಬೆನ್ಹದದನು "ಅವರು ಯುದ್ಧ ಕ್ಕಾಗಿ ಬಂದಿದ್ದರೂ ಸಮಾಧಾನಕ್ಕಾಗಿ ಬಂದಿದ್ದರೂ ಅವರನ್ನು ಸಜೀವಿಗಳನ್ನಾಗಿ ಹಿಡಿದು ತನ್ನಿರಿ" ಎಂದು ಆಜ್ಞಾಪಿಸಿದನು (ವಚನ 18).

ಬೆನ್ಹದದನು ಅವರನ್ನು ಯಾಕೆ ಸಜೀವಿಗಳನ್ನಾಗಿ ಹಿಡಿದು ತರಬೇಕೆಂದಿದ್ದನೂ? ಬಹುಶಃ ಆತನು ಅವರನ್ನು ವೈಯಕ್ತಿಕವಾಗಿ ಅವರು ಶೋಷಣೆಗೊಳಗಾಗುವುದನ್ನೂ ಮತ್ತು ಕಷ್ಟಪಡುವುದನ್ನೂ ನೋಡಬಯಸಿರಬೇಕು. ಆತನ ಕಾರಣಗಳು ಏನೇ ಇರಲಿ ಆತನ ಆಜ್ಞೆಗಳು ಅನಾಗರಿಕವಾದವುಗಳು ಮತ್ತು ಮೂರ್ಖತನವಾದವುಗಳು. ಅವು ಅನಾಗರೀಕ ವಾದವು ಏಕೆಂದರೆ ಒಂದು ವೇಳೆ ಆ ಜನರು ಶಾಂತಿಯ ಕಾರಣದಿಂದ ಬಂದಿದ್ದಾದರೆ, ಅವರನ್ನು ಪ್ರತಿನಿಧಿಗಳಂತೆ ಉಪಚರಿಸಬೇಕು, ಗುಲಾಮರಂತಲ್ಲ. ಆಜ್ಞೆಗಳೂ ಸಹ ಮೂರ್ಖತನದ್ದಾಗಿದ್ದವು, ಯಾಕೆಂದರೆ ಆ ಮನುಷ್ಯರು ಯುದ್ಧಕ್ಕಾಗಿ ಬಂದಿದ್ದರೆ, ಬೆನ್ಹದದನು ಇಂಥ ಅಸಾಧ್ಯ ಸ್ಥಿತಿಯಲ್ಲಿ ತನ್ನ ಸೈನಿಕರ ಜೊತೆಯಲ್ಲಿ ಆ ಸ್ಥಾನದಲ್ಲಿರುತ್ತಿದ್ದನು. ಒಂದು ಸಾರಿ ಆಜ್ಞೆಯು ಕೊಡಲ್ಪಟ್ಟಿದ್ದೆ ಆದರೆ, ಮರಣದ ಭಯದಿಂದ ಯಾವನೊಬ್ಬನೂ ಅದನ್ನು ಮುರಿಯುವ ಧೈರ್ಯವನ್ನು ಮಾಡುತ್ತಿರಲಿಲ್ಲ. ಅವರು ಆ ಯೌವನಸ್ಥರನ್ನು ಹೇಗೆ ಜೀವಂತವಾಗಿ ತೆಗೆದುಕೊಂಡು ಹೋಗಬಹುದು? ಅವರು ಸಾಯುವರು ಎಂಬ ಭಯದಿಂದ ಅವರು ಬಾಣದಿಂದ ಹೊಡೆಯಲಿಲ್ಲ. ಅವರು ತಮ್ಮ ಈಟಿಯನ್ನು ಎಸೆಯಲಿಲ್ಲ, ತಮ್ಮ ಕತ್ತಿಯನ್ನು ಬೀಸಲಿಲ್ಲ ಅಥವಾ ತಮ್ಮ ಚಾಕುವನ್ನು ಒರೆಯಿಂದ ಹೊರಗೆ ತೆಗೆಯಲೇ ಇಲ್ಲ. ಅವರನ್ನು ಗಾಬರಿಗೊಳಿಸುವಂಥ ಭಯವನ್ನು ಹುಟ್ಟಿಸುವ ಕರ್ಕಶದ ಸದ್ದನ್ನಾಗಲೀ ಮತ್ತು ಅವರ ಮರಣಕ್ಕೆ ಕಾರಣವಾಗುವ ಯಾವುದನ್ನೂ ಕೂಡಾ ಅವರು ಮಾಡಲಿಲ್ಲ. ಅವರಿಗಿರುವ ಒಂದೇ ಒಂದು ಅವಕಾಶ ಎಂದರೆ ಅವರ ಮೇಲೆ ಬೀಳುವದು, ಕೇವಲ ಸಂಖ್ಯೆಯ ಬಲದಿಂದ ಕುಗ್ಗಿಸುವಂತೆ ಮಾಡುವದು, ಅವರನ್ನು ಯೌವನಸ್ಥರು ಕರುಣೆಯಯಲ್ಲಿ ಆವರಿಸುವಂತೆ ಬಿಟ್ಟು ಹೋಗುವುದೇ ಆಗಿತ್ತು. (ಸಹ ಯುದ್ಧದಲ್ಲಿ ನನ್ನ ವೈರಿಗಳು ಆಕ್ರಮಣದಡಿಯಲ್ಲಿ ನನಗೆ ತೊಂದರೆ ಮಾಡದೇ ಹೋದರೆ ನಾನು ಅದು ವಿಪರೀತ ಎಂದು ಕೊಳ್ಳಬಹುದು!)

ವಚನ 20 ಅದರ ಪರಿಣಾಮವನ್ನು ಹೇಳುತ್ತದೆ "ಪ್ರತಿಯೊಬ್ಬನೂ [ಇಸ್ರಾಯೇಲನು] ತನ್ನ ಎದುರಿಗೆ ಬಂದ ವಿರೋಧಿಯನ್ನು ಕೊಲ್ಲುತ್ತಾ ಮುಂದುವರೆದನು."[12] 7,000 ಜನರ ಸೈನ್ಯವು ಅವರನ್ನು ಹಿಂಬಾಲಿಸಿತು ಮತ್ತು ಯುದ್ಧವನ್ನು ಹೂಡಿತು (ವಚನ 19). "ಕೂಡಲೇ ಒಂದು ದಾಳಿಯಾಯಿತು," ಅರಾಮ್ಯರು ಓಡಿಹೋಗಲು ಇಸ್ರಾಯೇಲ್ಯರು ಅವರನ್ನು ಹಿಂದಟ್ಟಿದ್ದರು ಅವರ ಅರಸನಾದ ಬೆನ್ಹದದನು ಕೆಲವು ರಾಹುತರು ಕುದುರೆಗಳನ್ನೇರಿ ಓಡಿ ತಪ್ಪಿಸಿಕೊಂಡರು[13] (ವಚನ 20ಬಿ).

ಈ ಎಲ್ಲಾ ಸಮಯದಲ್ಲಿ ಆಹಾಬನು ಎಲ್ಲಿದ್ದನು? ಪಟ್ಟಣದಲ್ಲಿ ಸುರಕ್ಷಿತನಾಗಿದ್ದನು. ಈಗ ಆತನು ಹೊರಬಂದನು ಮತ್ತು ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡನು. "ಇಸ್ರಾಯೇಲ್ಯ ಅರಸನು ಹೊರಟುಬಂದು ಆರಾಮ್ಯರ ರಥಾಶ್ವಬಲಗಳನ್ನು ಸೋಲಿಸಿ ಮಹಾಸಮೂಹವನ್ನು ಸಂಹರಿಸಿದನು" (ವಚನ 21).

ಇದು ದೇವರು ಹೇಳಿದ ಹಾಗೆಯೇ ಆಯಿತು! ಪರಿಸ್ಥಿತಿಯು ನಿರಾಶಾದಾಯಕವಾಗಿತ್ತು, ಆದರೆ ಯೆಹೋವನ ಹಸ್ತದಿಂದ 232 ಯೌವನಸ್ಥರನ್ನು ಉಪಯೋಗಿಸುವ ಮೂಲಕ ಅದ್ಭುತವಾದ ಜಯವನ್ನು ಪಡೆದು ಅವರು ತಮ್ಮ ವೈರಿಗಳಿಂದ ಆ ದಿನ ಬಿಡುಗಡೆಯಾದರು. ನಾವು ಮುಂದಿನ ವಚನವನ್ನು ಹೀಗೆ ಓದುವುದನ್ನು ಎದುರು ನೋಡುವವರಾಗಿದ್ದೆವೆ; "ಮತ್ತು ಆಹಾಬನು ಸಮಾರ್ಯಪಡುವುದನ್ನು ಪ್ರಯೋಗಿಸಿದನು." ದುರಂತವೆಂದರೆ, ಅಲ್ಲಿ ಇಂಥ ವಚನವು ಇಲ್ಲ. ನಾವು ಹೇಳಲ್ಪಟ್ಟಂತೆ, ಈ ವಿಜಯವು ಆಹಾಬನ ಹೃದಯದ ಮೇಲೆ ಯಾವ ಪರಿಣಾಮವನ್ನೂ ಬೀರಲಿಲ್ಲ.

ಒಂದು ಅವಕಾಶವು ಹೋಯಿತು. ಕೇವಲ ಎರಡು ಉಳಿದವು.

## ಆಹಾಬನ ಎರಡನೆಯ ಅವಕಾಶ (20:22-30)

ನೆನಸದಂಥಹ ವಿಜಯವನ್ನು ಇಸ್ರಾಯೇಲ್ಯರು ಆಚರಿಸುತ್ತಿರುವಂತೆ, ಪ್ರವಾದಿಯು ಆಹಾಬನಿಗೆ ಸಿರಿಯಾ ದೇಶವು ಮುಂದಿನ ವರ್ಷದಲ್ಲಿ ನಿನಗೆ ತಿರುಗಿ ಬೀಳುತ್ತದೆ ಎಂದು ಎಚ್ಚರಿಸಿದನು[14] (ವಚನ 22). ಆತನ ಸಲಹೆಯೆಂದರೆ "ಸಿದ್ಧನಾಗಿರು."[15]

ಅದೂ ಖಚಿತವೇ. ಬೆನ್ಹದದನಂಥ ವಿಷಕಾರಿಯೂ ಮತ್ತವನ ಸಲಹೆಗಾರರು ಮುಂದೆ ಇಸ್ರಾಯೇಲರನ್ನು ಹೇಗೆ ಸೋಲಿಸಬೇಕೆಂಬುದರ ಬಗೆಗೆ ಇಗಾಗಲೇ ಚರ್ಚೆಯನ್ನು ನಡೆಸಿದ್ದರು.

> ಆರಾಮ್ಯರ ಅರಸನ ಮಂತ್ರಿಗಳು ತಮ್ಮ ಒಡೆಯನಿಗೆ - ಇಸ್ರಾಯೇಲ್ಯರ ದೇವರು ಬೆಟ್ಟಗಳ ದೇವರಾಗಿರುವುದರಿಂದ ಅವರು ನಮ್ಮನ್ನು ಸೋಲಿಸಿದರು; ನಾವು ಅವರೊಡನೆ ಬೈಬಲಿನಲ್ಲಿ ಯುದ್ಧಮಾಡುವದಾದರೆ ಹೇಗೂ ಜಯಹೊಂದುವೆವು ... ಆನಂತರ ನಮ್ಮ ಸೈನ್ಯದಿಂದ ನಷ್ಟವಾಗಿ ಹೋದಷ್ಟು ಜನರನ್ನೂ ಕುದುರೆಗಳನ್ನೂ ರಥಗಳನ್ನೂ ತಿರುಗಿ ಕೂಡಿಸಿ ಅವರೊಡನೆ ಬೈಲಿನಲ್ಲಿ ಯುದ್ಧಮಾಡೋಣ; ನಮಗೆ ಹೇಗೂ ಜಯಸಿಕ್ಕುವದು ಎಂದು ಹೇಳಿದರು (ವಚನಗಳು 23, 25).[16]

"ಅವರನ್ನು ಹೊಡೆದುಬಿಡುವೆವು ಅದರಲ್ಲಿ ಸಂದೇಹವೇ ಇಲ್ಲ" ಎಂದು ಬೆನ್ಹದದನ ಸಹೆಗಾರರು ಅವನಿಗೆ ಹೇಳಿದರು (ವಚನ 25, LB).

ಈ ಸಲಹೆಗೆ ದೈವಶಾಸ್ತ್ರಿಯ ಕಾರಣವು ಕೊಡಲ್ಪಡುತ್ತದೆ, ಮತ್ತು ಇದು ಪ್ರಾಯೋಗಿಕದಂತೆ ಕಾಣುತ್ತದೆ. ಅನ್ಯರ ದೇವರು ಪ್ರಾದೇಷಿಕ ದೈವತ್ವದವುಗಳು ಎಂದು ಪರಿಗಣಿಸಲ್ಪಡುತ್ತಿದ್ದವು. ಇಸ್ರಾಯೇಲ್ಯರ ರಾಜಧಾನಿಯಾದ ಸಮಾರ್ಯವು, ಗುಡ್ಡದ ಮೇಲೆ ಕಟ್ಟಲ್ಪಟ್ಟಿತ್ತು; ದಮಸ್ಕವು ಸಿರಿಯಾದ ರಾಜಧಾನಿಯಾಗಿತ್ತು, ಇದು ಮೈದಾನದಲ್ಲಿ ಸ್ಥಾಪಿತವಾಗಿತ್ತು. ಇದು ಸಿರಿಯನ್ನರು ತಮ್ಮ ದೇವರು ಮೈದಾನದ ದೇವರು ಇಸ್ರಾಯೇಲ್ಯರ ದೇವರ ಬೆಟ್ಟಗಳ ದೇವರು ಎಂದು ಯೋಚಿಸುವದು ಸ್ವಾಭಾವಿಕ. ಬಹುಶಃ ಕುಟಿಲವಾದ ಸಲಹೆಗಾರರು ಸಹ ತಮ್ಮ ಸಲಹೆಗೆ ಪ್ರಯೋಗಿಕ ಕಾರಣವನ್ನು ಹೊಂದಿದ್ದರು; ಸಿರಿಯಾದ ರಥಗಳು, ಅವರ ಆಯುಧ ಶಾಲೆಯ ಮಹತ್ವದ ಭಾಗಗಳಾಗಿದ್ದು, ಅವುಗಳು ಸಮಾನವಾದ ನೆಲದಲ್ಲಿ ಒಳ್ಳೆಯ ರೀತಿಯಿಂದ ಕಾರ್ಯಮಾಡುತ್ತಿದ್ದವು. ಇಸ್ರಾಯೇಲರು ತಮ್ಮ ಬೆಟ್ಟ ದೇಶದಿಂದ ಯುದ್ಧವನ್ನು ಮಾಡಲು ಗೇರಿಲ್ಲಾ ರೀತಿಯನ್ನು ಹೆಚ್ಚಾಗಿ ಬಳಸುತ್ತಿದ್ದರಿಂದ ತೆರೆದಿಡಲು ಇದೊಂದು ಅನಾನುಕೂಲವಾಗಿತ್ತು.

ಒಂದು ವರ್ಷದ ನಂತರ ಬೆನ್ಹದದನು ಸೈನ್ಯವನ್ನು ತಿರುಗಿ ಕೂಡಿಸಿದನು. ಆತನ ಸೈನ್ಯವು ತಗ್ಗು ಪ್ರದೇಶದ ಆರಂಭಕ್ಕೆ ಬಂದು ನಿಂತಿತು (ವಚನ 26).[17] ಆಹಾಬನು ಬೇಗನೆ ತನ್ನ ಸೈನ್ಯವನ್ನು ಒಗ್ಗೂಡಿಸಿದನು ಮತ್ತು ಅವರನ್ನು ಸಿರಿಯದವರನ್ನು ಎದುರಿಸಲು ನಡೆಸಿದನು; "ಆರಾಮ್ಯರು ದೇಶದಲ್ಲೆಲ್ಲಾ ವ್ಯಾಪಿಸಿಕೊಂಡಿದ್ದರು. ಆಡುಮರಿಗಳ ಎರಡು ಹಿಂಡಿನಂತಿರುವ ಇಸ್ರಾಯೇಲ್ಯರು ಅವರ ಎದುರಿನಲ್ಲಿ ಪಾಳಯಮಾಡಿಕೊಂಡರು" (ವಚನ 27). ತಿರುಗೊಂದಾವರ್ತಿ ಇದು ಜಯಿಸಲಾರದ ಸಂದರ್ಭವಾಗಿದ್ದು ಮತ್ತೊಮ್ಮೆ ದೇವರು ಮಧ್ಯೆಪ್ರವೇಶಿಸಿದನು.

> ಆಗ ದೇವರ ಮನುಷ್ಯನು[18] ಇಸ್ರಾಯೇಲ್ಯರ ಅರಸನ ಬಳಿಗೆ ಬಂದು ಯೆಹೋವನು ಹೀಗನ್ನುತ್ತಾನೆ - "ಯೆಹೋವನು ತಗ್ಗುಗಳ ದೇವರಲ್ಲ, ಬೆಟ್ಟಗಳ ದೇವರಾಗಿರುತ್ತಾನೆ ಅಂದುಕೊಂಡು ಬಂದಿರುವ ಈ ಆರಾಮ್ಯರ ಮಹಾ ಸಮೂಹವನ್ನು ನಿನ್ನ ಕೈಗೆ ಒಪ್ಪಿಸುವೆನು; ಇದರಿಂದ ನಾನು ಯೆಹೋವನೇ ಎಂದು ನಿನಗೆ ಗೊತ್ತಾಗುವದು ಎಂದು ಹೇಳಿದನು" (ವಚನ 28).

ದೇವರು ಕೇವಲ ತನ್ನ ಜನರ ಉಳಿವಿಗಾಗಿ ಲಕ್ಷಕೊಡುವವನಾಗಿರಲಿಲ್ಲ; ಆತನ ಗೌರವವು ವಿಪತ್ತಿನ ಸ್ಥಿತಿಯಲ್ಲಿತ್ತು. ಸಿರಿಯನ್ನರು ಆತನನ್ನು ಪ್ರಾದೇಶಿಕ ದೇವರೆಂದು ಹಿಯಾಳಿಸಿದ್ದರು. ಆತನ ಕೇವಲ ನಿಜದೇವರೆಂದು ತನ್ನ ಶಕ್ತಿಯನ್ನು ತೋರಿಸಲಿಲ್ಲ, ಆದರೆ ತಾನು ಸಾರ್ವತ್ರಿಕ ದೇವರೆಂದು ತೋರಿಸಲು! ದೇವರ ಸರ್ವಭೌಮತ್ವವನ್ನೂ ಮತ್ತು ಆತನ ಸರ್ವವ್ಯಾಪಿಗುಣವನ್ನೂ ತೋರಿಸಲು ಮತ್ತು ಒಪ್ಪಿಕೊಳ್ಳಲು ಆಹಾಬನಿಗೆ ಎರಡನೆಯ ಅವಕಾಶವನ್ನು ಕೊಟ್ಟಿರಬಹುದು.

ನಮ್ಮ ವೇದಭಾಗದಲ್ಲಿ ಕೊಟ್ಟಿರುವ ಸೈನ್ಯದ ಗಾತ್ರವು ಯುದ್ಧದಲ್ಲಿ ಗೆಲ್ಲಬೇಕಾದರೆ ದೇವರ ಶಕ್ತಿಯಿಂದಲೇ ಎಂದು ಇನ್ನೊಂದು ಸಾರಿ ಒತ್ತಿ ಹೇಳುತ್ತದೆ. "ವೇಗಿಗಳಿಗೆ ಓಟದಲ್ಲಿ ಗೆಲುವಿಲ್ಲ, ಬಲಿಷ್ಟರಿಗೆ ಯುದ್ಧದಲ್ಲಿ ಜಯವಾಗದು" (ಪ್ರಸಂಗಿ 9:11) ಬದಲಾಗಿ "ಯುದ್ಧಫಲವು ಯೆಹೋವನ ಕೈಯಲ್ಲಿದೆ" (1 ಸಮುವೇಲ 17:47). ಕೀರ್ತನೆ 24:8ರಲ್ಲಿ ಸತ್ಯವು ಪ್ರಾಯೋಗಿ ಸಲ್ಪಟ್ಟಿದೆ, "ಮಹಾಬಲಿಷ್ಟನೂ ವಿಶೇಷ ಪರಾಕ್ರಮಿಯೂ ಆಗಿರುವ ಯೆಹೋವ, ಯುದ್ಧವೀರ ನಾಗಿರುವ ಯೆಹೋವ."

ಅಧ್ಯಾಯ 20ರಲ್ಲಿನ ಮುಂದಿನ ಕೆಲವಚನಗಳು ಸಿರಿಯಾದ ಮೇಲೆ ಇಸ್ರಾಯೇಲರ ಮಹಾ ಜಯವನ್ನು ಕುರಿತು ಹೇಳುತ್ತದೆ. ಒಂದೇ ದಿನದಲ್ಲಿ ಹಿಡಿತುಂಬುವಷ್ಟಿದ್ದ ಇಸ್ರಾಯೇಲ್ಯರು 100,000 ಜನ ಸಿರಿಯದ ಕಾಲಾಳುಗಳನ್ನು ಕೊಂದರು (ವಚನ 29). ಉಳಿದ ಸಿರಿಯನ್ನರು ಸಮೀಪದಲ್ಲಿರುವ ಪಟ್ಟಣಗಳಲ್ಲಿ ಹರಡಿ ಹೋದರು; ಆದರೆ ಆ ಪಟ್ಟಣದ ಗೋಡೆಯು ಅವರ ಮೇಲೆ ಬಿದ್ದದರಿಂದ ಅವರೂ ಸತ್ತರು. ಪಟ್ಟಣದ ಗೋಡೆಯು 27,000 ಜನರ ಮೇಲೆ ಬಿದ್ದಿತು, ಅಲ್ಲಿ ಸತ್ತವರು ಮತ್ತು ಗಾಯಾಳುಗಳು ಅನೇಕರಿರಬಹುದು.[19] ಬೆನ್ಹದದನು ಸೆರೆಹಿಡಿಯಲಾದ ಪಟ್ಟಣದ ಚಿಕ್ಕ ಕೋಣೆಯಲ್ಲಿ ನಡಗುವುದನ್ನು ಕೊನೆಗೊಳಿಸಿದನು (ವಚನ 30). ದೇವರು ಆಹಾಬನ ಕೈಯಿಂದ ವೈರಿಯನ್ನು ಬಿಡುಗಡೆಗೊಳಿಸಿದನು!

ಇನ್ನೊಂದು ಅದ್ಭುತವಾದ ಜಯವು ದೇವರ ಕೈಯಿಂದ ತರಲ್ಪಟ್ಟಿತು! ಮತ್ತೊಮ್ಮೆ, ನಾನು ಹೀಗೆ ಓದಲು ಬಯಸಬಹುದು: "ಮತ್ತು ಆಹಾಬನು ಸಿರಿಯಾದ ವಿರುದ್ಧ ಅಸಾಧ್ಯ ವಾದ ಸಂಗತಿಗಳಿಂದ ಎರಡು ವಿಜಯಗಳಿಂದ ಸ್ಫೂರ್ತಿಯನ್ನು ಹೊಂದಿ, ತನ್ನ ತಲೆಯನ್ನು ತಗ್ಗಿಸಿದನು ಮತ್ತು ಯೆಹೋವನೇ ನಿಜವಾದ ದೇವರು ಮತ್ತು ಜೀವಿಸುವ ದೇವರು ಎಂದು ಗುರುತಿಸಿದನು." ಅಲ್ಲಿ ಇಂಥ ವಚನಗಳು ಇಲ್ಲ.

ಇದು ಆಶ್ಚರ್ಯಕರವಾದಂತದ್ದಲ್ಲ ಮನುಷ್ಯರು ದೇವರನ್ನು ತ್ಯಜಿಸಿದ್ದಾಗ್ಯೂ ದೇವರು ಅಂತವರೊಂದಿಗೆ ಹೇಗೆ ಕಾರ್ಯಮಾಡುತ್ತಾನೆ ಎಂಬುದು ಆಶ್ಚರ್ಯವಾದುದಾಗದೇ?

ಎರಡನೆಯ ಅವಕಾಶವೂ ಹೋಯಿತು. ಈಗ ಒಂದೇ ಒಂದು ಅವಕಾಶವು ಉಳಿಯಿತು.

## ಆಹಾಬನ ಕೊನೆಯ ಅವಕಾಶ (20:30-43)

ದೇವರು ಬಲು ಕರುಣೆಯುಳ್ಳವನು! ಆತನು ಆಹಾಬನಿಗೆ ಇನ್ನೊಂದು ಅವಕಾಶವನ್ನು ಕೊಟ್ಟನು.

ಬೆನ್ಹದದನು ಹೇಡಿಯಂತೆ ಆತನು ತನ್ನ ಸ್ಥಳದಲ್ಲಿ ಅಡಗಿಕೊಂಡನು, ಆತನ ಸಲಹೆಗಾರರು ಒಂದು ತಂತ್ರವನ್ನು ಸೂಚಿಸಿದರು:

> ಇಸ್ರಾಯೇಲ್ಯರ ಅರಸರು ದಯೆಯುಳ್ಳವರೆಂದು ನಾವು ಕೇಳಿದ್ದೇವೆ; ಆದದರಿಂದ ಸೊಂಟಕ್ಕೆ ಗೋಣೀ ತಟ್ಟುಕಟ್ಟಿಕೊಂಡು ತಲೆಯಮೇಲೆ ಹಗ್ಗವನ್ನಿಟ್ಟುಕೊಂಡು ಆ ಅರಸನ ಬಳಿಗೆ ಹೋಗುವುದಕ್ಕೆ ನಮಗೆ ಅಪ್ಪಣೆಯಾಗಲಿ; ಹೀಗೆ ಮಾಡುವುದಾದರೆ ಅವನು ನಿನ್ನ ಜೀವವನ್ನು ಉಳಿಸಾನು (ವಚನ 31).

ಗೋಣಿತಟ್ಟು ಪಶ್ಚಾತ್ತಾಪವನ್ನು ಮತ್ತು ತಾಳ್ಮೆಯನ್ನು ಸೂಚಿಸುವುದಾಗಿದೆ. ಆದರೆ ನಾವು ತಲೆಯ ಹಗ್ಗದ ಬಗೆಗೆ ಯೋಚಿಸಬೇಕಾಗಿದೆ. ಬಹುಶಃ ಅವರು ತಮ್ಮ ಕತ್ತಿನ ಸುತ್ತಲೂ ಹಗ್ಗದ ಕುಣಿಕೆಯನ್ನು[20] ಇಟ್ಟು ಕೊಂಡರು ಎಂಬ ಹೇಳಿಕೆಯಂತೆ ನಾವು ನಿನ್ನ ಕರುಣೆಯಲ್ಲಿ ಇದ್ದೇವೆ ಎಂದು ಆಹಾಬನ ಸನ್ನಿಧಿಗೆ ಹೋಗುವ ಯೋಜನೆಯಲ್ಲಿದ್ದರು. ಅದು "ನಾವು ನಿನ್ನ ಕೈಯಲ್ಲಿದ್ದೇವೆ ನೀನು ನಮ್ಮೊಡನೆ ನಿನ್ನ ಚಿತ್ತದಂತೆ ಮಾಡಬಹುದು, ನಮ್ಮನ್ನು ಕೊಲ್ಲಬಹುದು, ನಮ್ಮನ್ನು ಉಳಿಸಲೂಬಹುದು" ಎಂದು ಹೇಳುವಂತಿತ್ತು.

ಬೆನ್ಹದದನು ಯಾಕೆ ಈ ಸೇವಕರ ಮಾತನ್ನು ಕೇಳಿದನು ಎಂಬುದು ನನಗೆ ಖಚಿತವಿಲ್ಲ. ಇವರು ಬಹುಶಃ "ನಾವು ಮೈದಾನದಲ್ಲಿ ಯುದ್ಧಮಾಡಿದರೆ ನಾವು ಗೆಲ್ಲುವುದರಲ್ಲಿ ನಮಗೆ ಸಂಶಯವೇ ಇಲ್ಲ" ಎಂದು ಹೇಳಿದ ಅದೇ ಸಲಹೆಗಾರರಿರಬಹುದು. ಹೇಗೋ ಆತನು ಅವರ ಮಾತನ್ನು ಕೇಳಿದನು. ಆತನು ಮೊದಲು ಆಹಾಬನ ಹತ್ತಿರ ತನ್ನ ಸೇವಕರನ್ನು ಕಳುಹಿಸಿದನು, ಗೋಣಿ ತಟ್ಟನ್ನು ತೊಟ್ಟು ಮತ್ತು ತಮ್ಮ ತಲೆಯ ಮೇಲೆ ಹಗ್ಗವನ್ನು ಇಟ್ಟಿಕೊಂಡರು (ವಚನ 32ಬಿ). ಅವರು ಅರಸನಿಗೆ "ನನಗೆ ಜೀವದಾನಮಾಬೇಕೆಂದು ನಿನ್ನ ಸೇವಕನಾದ ಬೆನ್ಹದದನು ವಿಜ್ಞಾಪಿಸುತ್ತಾನೆ" ಎಂದು ಹೇಳಿದರು (ವಚನ 32ಸಿ). "ನಾನು ನಿನ್ನನ್ನು ಧೂಳಿನಂತೆ ಮಾಡುತ್ತೇನೆ" ಎಂದು ಹೇಳಿದ ರಾಜನ ಮಾತಿಗೂ "ದಯಮಾಡಿ ನನಗೆ ಜೀವಿಸಲು ಬಿಡು" ಎಂದು ಹೇಳುತ್ತಿರುವ ಮಾತಿನಲ್ಲಿಯ ಧ್ವನಿಯಲ್ಲಿ ಎಂಥ ಬದಲಾವಣೆಯು ಇದೆ!

ಆಹಾಬನು ಬೆನ್ಹದದನು ಕಗ್ಗೊಲೆಯಿಂದ ತಪ್ಪಿಸಿಕೊಂಡದ್ದನ್ನು ಕೇಳಿ ಆಶ್ಚರ್ಯಗೊಂಡನು. ಆತನು "ಬೆನ್ಹದದನು ಇನ್ನೂ ಜೀವದಿಂದಿದ್ದಾನೋ?" (ವಚನ 32ಬಿ). ನಂತರ ಆಶ್ಚರ್ಯಕರವಾದ ಹೇಳಿಕೆಯು ಇಸ್ರಾಯೇಲ್ಯರ ಅರಸನಿಂದ ಬಂದಿತು: "ಅವನು ನನ್ನ ಸಹೋದರನು" (ವಚನ 32ಸಿ). ಬೆನ್ಹದದನು ಇಸ್ರಾಯೇಲ್ಯರನ್ನು ದ್ವೇಷಿಸಿದಂತಹ ಒಬ್ಬ ಮನುಷ್ಯನು, ಇಸ್ರಾಯೇಲ್ಯರ ರಾಜಧಾನಿಯನ್ನು ಧೂಳಿಯನ್ನಾಗಿ ಮಾಡುತ್ತೇನೆ ಎಂದು ಬೆದರಿಸಿದವನು, ಇಸ್ರಾಯೇಲ್ಯನ್ನು ನಾಶಮಾಡಲು ಈಗ ತಿರುಗಿ ಬಂದಂತವನನ್ನು ಆಹಾಬನು "ನನ್ನ ಸಹೋದರನು" ಎಂದು ಕರೆದನು.

ಆಹಾಬನು ಬೆನ್ಹದದನನ್ನು ಯಾಕೆ ಸಹೋದರನು ಎಂದು ಕರೆದನೊ ನಮಗೆ ತಿಳಿಯದು. ವಚನ 34 ಆಹಾಬನ ತಂದೆಯೂ ಬೆನ್ಹದದನ ತಂದೆಯೂ ಕೆಲವರ್ಷಗಳ ಹಿಂದೆ ಒಡಂಬಡಿಕೆಯನ್ನು ಮಾಡಿಕೊಂಡಿದ್ದನ್ನು ಸೂಚಿಸುತ್ತದೆ, ಮತ್ತು ಅದನ್ನೆ ಆಹಾಬನು ಸೂಚಿಸುತ್ತಿದ್ದಾನೆ. ಬಹುಶಃ ಬೆನ್ಹದದನು ಬಲುವಾಗಿ ಸೋಲಿ ಸಲ್ಪಟ್ಟಿದ್ದರೂ, ಆಹಾಬನು ಇನ್ನೂ ಆತನಿಂದ ಭಯಗ್ರಸ್ತನಾಗಿದ್ದನು ಮತ್ತು ಆತನು ಬೆನ್ಹದನ ಒಳ್ಳೆಯ ಸ್ನೇಹದಲ್ಲಿ ಇರಬೇಕೆಂದು

ಬಯಸಿದನು. ನನ್ನೊಬ್ಬ ಸ್ನೇಹಿತನು[21] ಯೋಚಿಸುವುದೇನೆಂದರೆ ಆಹಾಬನು ಪರಿಸ್ಥಿತಿಯನ್ನು ತಿರುಗಿಸಿಕೊಂಡು ತನ್ನ ಸ್ವಂತ ಲಾಭಕ್ಕಾಗಿ ಕುಟಿಲದ ರಾಜತಂತ್ರ ಆಟವನ್ನು ಆಡಿದನು ಎಂದು. ಏನೇ ಇರಲಿ ಆಹಾಬನು ಪರಿಸ್ಥಿತಿಯನ್ನು ತಿರುಗಿಸಿಕೊಂಡು ತನ್ನ ಸ್ವಂತ ಲಾಭಕ್ಕಾಗಿ ಕುಟಿಲದ ರಾಜತಂತ್ರ ಆಟವನ್ನು ಆಡಿದನು ಎಂದನು. ಏನೇ ಇರಲಿ ಆಹಾಬನ ಕಾರಣವು ಆತನ ಹೇಳಿಕೆಗಳು, ಆರ್ಥಿಕವಾಗಿ ಮತ್ತು ಆತ್ಮೀಕವಾಗಿ ಇವೆರಡರಲ್ಲಿ ಅವು ಮೂರ್ಖತನದ್ದು ಆಗಿವೆ. ಬರ್ಟಮನ್ ಕಾಫ್‌ಮನ್‌ರವರು "ಆಹಾಬನು ಇಲ್ಲಿ ನಾಶಮಾಡುವುದನ್ನು ಬಿಟ್ಟು ಅದು ತನ್ನ ವಿಜಯಕ್ಕೆ ಸಂಬಂಧಿಸಿದ್ದರೂ ಕೂಡಾ ತನ್ನನ್ನು ತಾನೇ ಸಹೋದರತ್ವದಲ್ಲಿ ಇರಿಸಿಕೊಂಡನು; ಮತ್ತು ಪ್ರವಾದಿಯು ಆಗಲೇ ಹೇಳಿರಬಹುದು, ಆತನು ತನ್ನನ್ನು ತಾನೇ ಸಹೋದರತ್ವದಲ್ಲಿ ಇರಿಸಿದ್ದು ತನ್ನ ಸ್ವಂತ ಜವಾಬ್ದಾರಿಕೆಯ ಮೇಲೆ."[22]

ಬೆನ್ಹದದನ ಜನರ ಕಿವಿಗಳು "ಸಹೋದರ" ಎಂಬ ಹೇಳಿಕೆಯು ಬಲು ಶ್ಲಾಘನೀಯವಾದುದು, ಆದರೆ ಒಬ್ಬ ವ್ಯಕ್ತಿಯನ್ನು "ಸಹೋದರ" ಎಂದು, ಒಪ್ಪಿಕೊಳ್ಳುತ್ತಿರುವ ಈ ವ್ಯಕ್ತಿಯು ದೇವ ಜನರನ್ನು ನಾಶಮಾಡುವ ಕ್ರೂರವಾದ ಆಲೋಚನೆಯು ಬಲು ಮೂರ್ಖತನವಾದದ್ದು. ಬೆನ್ಹದದನ ಜನರ ಕಿವಿಗಳು "ಸೋದರ" ಎಂಬ ಶಬ್ದವನ್ನು ಹಿಡಿದವು ಮತ್ತು ಅವರು ಅದನ್ನೇ ಪುನರುಚ್ಚರಿಸಿದರು. "ನಿನ್ನ ಸೋದರನಾದ ಬೆನ್ಹದದನು ಎಂದು ಅವರು ಪ್ರತಿಧ್ವನಿಗೈದರು, ತಮ್ಮ ತಲೆಗಳನ್ನು ಅಲ್ಲಾಡಿಸುತ್ತಾ ಉತ್ಸಾಹದಿಂದ ಹೇಳಿದರು" (ವಚನ 33ಎ). ಆಹಾಬನು ತನ್ನ ಮಾರ್ಗವನ್ನು ಬಿಟ್ಟು ಆ ಮನುಷ್ಯನಿಗೆ ಅನುಕೂಲಮಾಡಿಕೊಟ್ಟನು (ವಚನ 33ಬಿ). ಇದು ಆಹಾಬನ ಬದಲು ಬೆನ್ಹದದನು ಯುದ್ಧದಲ್ಲಿ ಗೆದಿದ್ದರೆ ಇದು ಇರುತ್ತಿತೆ.

ಬೆನ್ಹದದನು ಇಸ್ರಾಯೇಲಿಗೆ,[23] ಸಂಬಂಧಿಸಿದ ಆಹಾಬನ ಅನೇಕ ಪಟ್ಟಣಗಳನ್ನು ಪುನಃ ತುಂಬಿಸುವುದರ ಬಗೆಗೆ ಕೆಲ ಅರ್ಥವಿಲ್ಲದ ವಾಗ್ದಾನಗಳನ್ನು ಮಾಡಿದನು,[24] ಮತ್ತು ಆಹಾಬನಿಗೆ ದಮಸ್ಕದಲ್ಲಿ ಸಣ್ಣ ವ್ಯವಹಾರ ಜಿಲ್ಲೆಯನ್ನು ಕಟ್ಟುವುದಕ್ಕೆ ಅವಾಶ ಕೊಡುವುದಾಗಿಯೂ ಹೇಳಿದನು (ವಚನ 34ಎ). ಇದೊಂದು ರೀತಿಯ ಬೇಶರತ್ತಾದ ಶರಣಾಗತಿಗಿಂತ ಹೆಚ್ಚಾಗಿ ವಾಣಿಜ್ಯದ ಒಪ್ಪಂದದಂತೆ ಕಾಣುತ್ತದೆ!

ಬೆನ್ಹದದನು ಎಸೆದ ತುಣುಕುಗಳಿಂದ ಆಹಾಬನು ನಿಜಕ್ಕೂ ರೋಮಾಂಚಿತನಾದನು. ಆತನು ಅವರನ್ನು ಅಂಗೀಕರಿಸಿದನು, ಸಿರಿಯದ ಅರಸನೋಡನೆ ಒಡಂಬಡಿಕೆಯನ್ನು ಮಾಡಿದನು ಮತ್ತು ಅವರನ್ನು ಮನೆಗೆ ಹೋಗಲು ಬಿಟ್ಟನು (ವಚನ 34ಬಿ). ಆಹಾಬನ ಸೈನ್ಯವು ಸಾವಿರಾರು ಹುಚ್ಚುನಾಯಿಗಳನ್ನು ಕೊಂದಮೇಲೆ ನಂತರ ತಂಡದ ನಾಯಕನನ್ನು ಸ್ವತಂತ್ರ ವಾಗಿ ಹೋಗಲು ಬಿಟ್ಟನು ಸ್ವತಂತ್ರ್ಯವಾಗಿ ಬೇಟೆಯಾಡಲು ಮತ್ತು ಕೊಲ್ಲಲು ಬಿಟ್ಟನು![25]

ಆಹಾಬನ ಈ ನಡವಳಿಕೆಯು ಈ ಅಧ್ಯಾಯದಲ್ಲಿ ಆತನು ಒಳ್ಳೆಯವನಂತೆ ಪ್ರತಿಬಿಂಬತನಾಗುವದನ್ನು ತೋರಿಸುತ್ತದೆ ಎಂದು ಕೆಲವರು ಮಾತನಾಡುತ್ತಾರೆ. ಇದೇ ಭಾಗದಲ್ಲಿ ಅನೇಕವು ಸಂಭವಿಸುವುದಕ್ಕೆ ಅನೇಕವು ಸೂಚಿಸುವಂತವುಗಳಾಗಿವೆ. ವಚನ 42 ಇದನ್ನು ಸ್ಪಷ್ಟಪಡಿಸುತ್ತದೆ, ಹೇಗೋ, ಇದು ಆಹಾಬನ ಕೊನೆಯ ಅವಕಾಶವಾಗಿತ್ತು ಮತ್ತು ಆತನ ಅದರ ಸದವಕಾಶವನ್ನು ಮಾಡಿಕೊಳ್ಳುವಲ್ಲಿ ಆತನು ವಿಫಲನಾಗಿದ್ದನು. ಆಹಾಬನು ಯಾವ ತಪ್ಪನ್ನು ಮಾಡಿದನು ಎಂಬುದನ್ನು ತಿರುಗಿ ನೋಡಿರಿ:

ಮೊದಲು, ದೇವರ ಚಿತ್ತವೇನು ಎಂದು ತಿಳಿದುಕೊಳ್ಳಲು ಆತನು ದೇವರ ಹತ್ತಿರ ಹೋಗಲಿಲ್ಲ. ಇದು ಯೆಹೋವನ ಯುದ್ಧವಾಗಿತ್ತೆ, ಹೊರತು ಆತನದಲ್ಲ. ಇದು ಆಹಾಬ ಮತ್ತು ಆತನ ಸೇನೆಯ ವಿಜಯವಾಗಿರಲಿಲ್ಲ ಬದಲಾಗಿ ಕರ್ತನ ಶಕ್ತಿಯಿಂದಲೆ. ಆಹಾಬನು ತನ್ನ ಮಾರ್ಗದುದ್ದಕ್ಕೂ ಹೇಡಿಯಂತಿದ್ದನು; ಆತನು ಈ ವಿಜಯಕ್ಕೆ ಯಾವ ಕೊಡುಗೆಯನ್ನೂ ಕೊಟ್ಟಿರಲಿಲ್ಲ. ಆತನು ಅತಿ ಕಡಿಮೆಯಾಗಿ ಮಾಡಿದ್ದೆಂದರೆ ದೇವರ ಇಚ್ಛೆಯನ್ನು ನಿರ್ಣಯವನ್ನು ಕರ್ತನೊಡನೆ ಪರಾಮರ್ಷಿಸದೆ ಇರುವುದೆ ಆಗಿದೆ (ಗಮನಿಸಿರಿ 1 ಅರಸು 22:5, 8).

ಎರಡನೆಯದಾಗಿ, ಆತನು ತನ್ನ ಹಿಂದಿನ ಜೀವಿತದಿಂದ ಏನನ್ನೂ ಕಲಿಯಲಿಲ್ಲ. ಹಿಂದೆ ಸೌಲನಿಗೆ ಆಗಾಗನನ್ನು ನಾಶಮಾಡಲು ಆಜ್ಞಾಪಿಸಿದಂತೆ ಈಗ ಇಸ್ರಾಯೇಲ್ಯರ ವೈರಿಗಳನ್ನು ನಾಶಮಾಡಲು ನಾಯಕನಿಗೆ ಆಜ್ಞೆಮಾಡಿದಂತದ್ದು ದೇವರಿಗೆ ಅಸಾಧ್ಯವಾದುದ್ದು ಅಲ್ಲ (1 ಸಮುವೇಲ 15). ಸೌಲನು ಆಗಾಗನನ್ನು ತನ್ನ ಸ್ವಂತ ಉದ್ದೇಶಕ್ಕಾಗಿ[26] ಉಳಿಸಿದನು ಮತ್ತು ಅದರ ಪರಿಣಾಮದಿಂದ ಕಷ್ಟಪಟ್ಟನು. ಆಹಾಬನೂ ಸಹ ಆತನ ಹೆಜ್ಜೆಯಜಾಡಿನಲ್ಲಿಯೇ ನಡೆದನು.[27]

ಮೂರನೆಯದಾಗಿ, ಆಹಾಬನು ಇಸ್ರಾಯೇಲ್ಯರ ವೈರಿಗಳೊಂದಿಗೆ ವೈವಾಹಿಕ ಸಂಬಂಧವನ್ನು ಬೆಳಿಸಿದನು. ದೇವರ ಆಜ್ಞೆಯು ವಿದೇಶಿ ವೈವಾಹಿಕ ಸಂಬಂಧವನ್ನು ಬಹಿಷ್ಕರಿಸಿದ್ದವು.

ನಾಲ್ಕನೆಯದು, ಆತನು ಇತರ ವೆಚ್ಚದ ಬಗ್ಗೆ ಆತನು ಉದಾರಿಯಾಗಿದ್ದನು. ಆತನು ದೇವರ ಜನರ ವೈರಿಗಳನ್ನು ಸ್ವತಂತ್ರ್ಯವಾಗಿ ಬಿಟ್ಟನು, ದೇವಜನರ ಮೇಲೆ ಅಪಾರಹಾನಿಯನ್ನು ಸರ್ವನಾಶವನ್ನು ಮಾಡಿದವರನ್ನು ಸ್ವತಂತ್ರ್ಯವಾಗಿ ಹೋಗಲು ಬಿಟ್ಟನು. ನಾನು ನಿಮಗೆ 2 ಅರಸು 6 ಮತ್ತು ನಂತರದಲ್ಲಿನ ಸಮಾರ್ಯದ ಮೇಲೆ ಮಾಡಿದ ಬೆನ್ಹದದನ ಲೂಟಿಯನ್ನು ಮತ್ತು ಇದರ ಕಾರಣವಾಗಿ ಬಲುವಾಗಿ ತೊಂದರಿಗೀಡಾದುದರ ಕಾರಣವನ್ನು ನಾನು ನೆನಪಿಸುತ್ತೇನೆ (ವಚನಗಳು 24-31). ದೇವರು ಬೆನ್ಹದದನನ್ನು ಆಹಾಬನ ಕೈಯಿಂದ ಬಿಡುಗಡೆಮಾಡಿದ್ದು ಆತನನ್ನು ತಟಸ್ಥಗೊಳಿಸಲು, ಆದರೆ ಆಹಾಬನು ಆತನನ್ನು ಗೌರವಿಸಿ ಆತನನ್ನು ಹೋಗಲು ಬಿಟ್ಟನು "ಸಹೋದರ" ಎಂಬ ಪದವು ಆತನ ಕಿವಿಯಲ್ಲಿ ರಿಂಗಣಿಸುತ್ತಾ ಇತ್ತು.

ಆಹಾಬನಿಗೆ ಈಗ ಮೂರನೆಯ ಮತ್ತು ಕೊನೆಯ ಅವಕಾಶವು ಕೊಡಲ್ಪಟ್ಟಿತು. ದೇವರು ಆತನಿಗೆ ಇನ್ನೂ ಹೆಚ್ಚಿನ ಅವಕಾಶವನ್ನು ಕೊಡಲಾರನು.

ಕೆಲಸಮಯದಲ್ಲಿ ಇದು ಇನ್ನೊಬ್ಬ ಪ್ರವಾದಿಯು[28] ಈ ದೃಷ್ಯದಲ್ಲಿ ಕಾಣಿಸಿಕೊಳ್ಳುತ್ತಾನೆ. ದೇವರ ಸೂಚನೆಗಳಡಿಯಲ್ಲಿ ನಡೆಯುತ್ತ, ಪ್ರವಾದಿಯು ಆಹಾಬನ ದಾರಿಯನ್ನು ಕಾಯುತ್ತಾ ಮಾರ್ಗದ ಬದಿಯಲ್ಲಿ ನಿಂತಿದ್ದನು. ಅರಸನ ದೃಷ್ಟಿಗೆ ಪ್ರವಾದಿಯು ಇದ್ದಾನೆಂದು ತಿಳಿದು ಬಂತು (ವಚನ 41), ಯಾಕೆಂದರೆ ಪ್ರವಾದಿಯು ತನ್ನ ಕಣ್ಣಿನ[29] ಸುತ್ತಲೂ ಗಾಯದ ಪಟ್ಟಿಯನ್ನು ಕಟ್ಟಿ, ಯುದ್ಧದಿಂದ ಗಾಯಗೊಂಡಿದ್ದನೂ ಎಂಬಂತೆ ಮುಖವನ್ನು ಮರೆಮಾಚಿದ್ದನು.[30] ಆಹಾಬನು ಅಲ್ಲಿಂದ ಹಾದು ಹೋದಾಗ ಪ್ರವಾದಿಯು ಕೂಗಿಕೊಂಡನು:

> ನಿನ್ನ ಸೇವಕನಾದ ನಾನು ಯುದ್ಧಕ್ಕೆ ಹೋದಾಗ ರಣರಂಗದಲ್ಲಿ ಒಬ್ಬನು ಇನ್ನೊಬ್ಬನನ್ನು ಹಿಡಿದುಕೊಂಡು ನನ್ನ ಬಳಿಗೆ ಬಂದು - ನೀನು ಇವನನ್ನು ಕಾಯಬೇಕು; ಇವನು ತಪ್ಪಿಸಿಕೊಂಡರೆ ಇವನ ಪ್ರಾಣಕ್ಕೆ ಬದಲಾಗಿ ನಿನ್ನ ಪ್ರಾಣವು ನನ್ನದಾಗಿರುವದು; ಅಥವಾ ನೀನು ನನಗೆ ಒಂದು ತಲಾಂತು ಬೆಳ್ಳಿಯನ್ನು ಕೊಡಬೇಕು ಎಂದು ಆಜ್ಞಾಪಿಸಿದನು. ನಾನು ಕೆಲಸದಲ್ಲಿದ್ದಾಗ ಅವನು ತಪ್ಪಿಸಿಕೊಂಡು ಹೋದನು ಎಂದು ಮೊರೆಯಿಟ್ಟನು (ವಚನಗಳು 39, 40ಎ).

ಆಹಾಬನಿಗೆ ಇದು ತಿಳಿದಿರಲಿಲ್ಲ, ಆದರೆ ಪ್ರವಾದಿಯು ಒಂದು ನಾಟಕೀಯವಾದ ಸಾಮ್ಯಕ್ಕೆ ಹೋಲಿಕೆಯಾದಂತಹ ಅರಸನಾದ ದಾವೀದನಿಗೆ ನಾತಾನನು ಹೇಳಿದಂತಹ ಕಥೆಯನ್ನು ಹೇಳುತ್ತಿದ್ದಾನೆ.[31] ನಾತಾನನ ಕಥೆಯು ದಾವೀದನು ಊರಿಯನಿಗೆ ಮಾಡಿದಂತಹ ಪ್ರಿಯವಾದ ಕುರಿಯನ್ನು ಕೊಂದಂತಹದಕ್ಕೆ ಸಾಮ್ಯವಾಗಿ ಹೇಳಿದನು. 1 ಅರಸು 20 ರಲ್ಲಿನ ಪ್ರವಾದಿಯ ಕಥೆಯು ಕೈದಿಯನ್ನು ಬಿಡುವುದಕ್ಕೆ ಇದು ಸಮಾನವಾದುದಾಗಿದ್ದು ಇದನ್ನು ಆಹಾಬನು ಬೆನ್ಹದದನೊಡನೆ ಮಾಡಿದನು.

ಅರಸರು ಸದಾ ನ್ಯಾಯಾಧಿಶ್ವರಂತೆ ವರ್ತಿಸುವುದಕ್ಕೆ ಕರೆಯಲ್ಪಟ್ಟಿದ್ದರು. ಇದು

ಆಹಾಬನಿಗೆ ಸರಳವಾದ ವಿಷಯವೆನಿಸಿತ್ತು. ಆತನು ಅದೆ ಶೈಲಿಯಲ್ಲಿ ಉತ್ತರಿಸಿದನು "ನಿನಗೆ ತೀರ್ಪು ಸರಿಯಾಗಿದೆ; ತೀರ್ಮಾನಿಸಿದವನು ನೀನೆ ಅಲ್ಲವೋ" (ವಚನ 40ಬಿ). ಪ್ರವಾದಿಯ ಕಥೆಯ ಪ್ರಕಾರ, ಆತನು ಒಂದು ತಲಾಂತು ಬೆಳ್ಳಿಯೊಡನೆ ಬರಬೇಕು ಅಥವಾ ಆ ಮನುಷ್ಯನು ತಪ್ಪಿಸಿಕೊಂಡರೆ ಸಾಯಬೇಕು. ಪ್ರತಿಯೊಬ್ಬ ಸೈನಿಕನೂ ಒಂದು ತಲಾಂತು ಬೆಳ್ಳಿಯನ್ನು (ಸುಮಾರು ಎಪ್ಪತ್ತೈದು ಪೌಂಡ್ ಬೆಳ್ಳಿ!), ತರುವುದಕ್ಕೆ ಯಾವುದೇ ಮಾರ್ಗವಿರಲಿಲ್ಲ, ಆಹಾಬನ ಮಾತುಗಳು ಗಲ್ಲಿಗೇರಿಸುವಂತಿದ್ದವು!

ಆಹಾಬನ ಅರಮನೆಯ ದ್ವಾರಪಾಲಕನು ಆ ಮನುಷ್ಯನನ್ನು ಸೆರೆಹಿಡಿಯಲು ಹೋದನು. ಪ್ರವಾದಿಯು ತನ್ನ ಗಾಯದ ಪಟ್ಟಿಯನ್ನು ತನ್ನ ಕಣ್ಣಿನಿಂದ ತೆಗೆದನು. ಅದರಲ್ಲಿ ಸಂಶಯವೇ ಇಲ್ಲ ಅರಸನು ಆಶ್ಚರ್ಯಚಕಿತನಾಗಿ ನೋಡುತ್ತಲಿದ್ದನು ಆತನೊಬ್ಬ ಪ್ರವಾದಿಯಾಗಿದ್ದನು (ವಚನ 41). ಈ ಪದಬಂಧದ ಅರ್ಥವೇನು? ಆಹಾಬನು ಬಲು ಸಮಯದವರೆಗೆ ಸಂಶಯದಲ್ಲಿ ಉಳಿಯಲಿಲ್ಲ. ಪ್ರವಾದಿಯು "ಸಂಹರಿಸಬೇಕೆಂದು ಹೇಳಿ ನಾನು ನಿನ್ನ ಕೈಗೆ ಒಪ್ಪಿಸಿದ ಮನುಷ್ಯನನ್ನು ನೀನು ಹೋಗಗೊಟ್ಟದ್ದರಿಂದ ಅವನ ಪ್ರಾಣಕ್ಕೆ ಬದಲಾಗಿ ನಿನ್ನ ಪ್ರಾಣವು ಹೋಗುವದು; ನಿನ್ನ ಪ್ರಜೆಗಳು ಅವನ ಪ್ರಜೆಗಳಾಗುವರು ಎಂಬುದಾಗಿ ಯೆಹೋವನು ಅನ್ನುತ್ತಾನೆ" (ವಚನ 42) ಎಂದು ಹೇಳಿದನು.

ಇದರ ಸೂಚ್ಯಾರ್ಥವು ಆಹಾಬನು ಇದನ್ನು ಮಾಡಲು ಕಾರಣ ಆತನು "ಇಲ್ಲಿ ಅಲ್ಲಿ ಕಾರ್ಯಮಗ್ನನಾಗಿರತ್ತಾನೆ" ಆತನ ತನ್ನ ಬಗೆಗೆ ಚಿಂತಿಸುವುದರಲ್ಲಿ ಮತ್ತು ದೇವ ಚಿತ್ತದ ಬಗೆಗೆ ಯೋಚಿಸಲು ಆತನು ಈ ಪರಿಸ್ಥಿತಿಯಲ್ಲಿ ಏನನ್ನು ಆತನು ಪಡಕೊಳ್ಳ ಬಹುದೆಂಬುದರಲ್ಲಿ ಆತನು ಬಲು ಚಟುವಟಿಕೆಯುಳ್ಳವನಾಗಿದ್ದನು. "ಇಲ್ಲಿ ಅಲ್ಲಿ ಕಾರ್ಯಮಗ್ನನಾಗಿರುತ್ತಾನೆ" ಎಂಬುದು ಇದು ಎಂಥವರನ್ನೂ ಕೆರಳಿಸುವ ವಿಚಾರವಾಗಿರುವ ಪದಪುಂಜವಾಗಿದೆ. ನಮ್ಮಲ್ಲಿ ಅನೇಕರು ಮುಖ್ಯವಾದ ಸಂಗತಿಗಳಲ್ಲಿ ತಮ್ಮನ್ನು ತೊಡಗಿಸದೇ ಅಮುಖ್ಯವಾದ ಸಂಗತಿಗಳಲ್ಲಿ ತೊಡಗಿಸಿಕೊಳ್ಳುವದು ನಿಜವಲ್ಲವೇ? ಕೆಲವರು ಜಾಣತನದಿಂದ "ನಮ್ಮ ದಿನದ ಬಲು ಭಯಂಕರವಾದ ಆತ್ಮೀಕ ರೋಗವೆಂದರೆ ಆತ್ಮಿಕ ಕ್ಷಯ: ನಾವು ಬಲುಕಾರ್ಯಶೀಲರಾಗಿದ್ದೇವೆ" ಎಂದು ಹೇಳುತ್ತಾರೆ.

ಆಹಾಬನು ತನ್ನ ಕೊನೆಯ ಅವಕಾಶವನ್ನು ಕಳೆದುಕೊಂಡನು, ಕಾರಣ ಅವನು ಏನು ಮಾಡುಬೇಕಾಗಿತ್ತೂ ಅದನ್ನು ಮಾಡದೇ ಇರುವುದರಿಂದ ಆ ಅವಕಾಶವನ್ನು ಆತನು ಕಳೆದು ಕೊಂಡನು. ಕಥೆಯು ಈ ರೀತಿಯಲ್ಲಿ ಕೊನೆಗೊಳ್ಳುತ್ತದೆ "ಇಸ್ರಾಯೇಲ್ಯರ ಅರಸನು ಸಿಟ್ಟಿನಿಂದ ಗಂಟುಮೋರೆ ಮಾಡಿಕೊಂಡು ಸಮಾರ್ಯದಲ್ಲಿದ್ದ ತನ್ನ ಮನೆಗೆ ಹೋದನು" (ವಚನ 43).

## ಮುಕ್ತಾಯ

ನಮ್ಮ ದೇವರು ಕರುಣೆಯುಳ್ಳ ದೇವರಾಗಿದ್ದಾನೆ. ಕೇವಲ ಒಬ್ಬ ಕರುಣೆಯುಳ್ಳ ಮತ್ತು ಕೃಪೆಯುಳ್ಳ ದೇವರು ಆಹಾಬನಿಗೆ ಇನ್ನೊಂದು ಅವಕಾಶವನ್ನು ಕೊಡಲು ಸಾಧ್ಯ. ಹೇಗೋ ಸಮಯ ಬಂದಾಗ ದೇವರ ತಾಳ್ಮೆಯು ಮುಗಿದುಹೋಯಿತು.[32] ನೀನು ವಿಫಲನಾಗಿ, ಅಯೋಗ್ಯ ಸೇವಕನಂತೆ ಹೊರಗೆ ಹಾಕಿಬಿಡುವರು (ಮತ್ತಾಯ 25:30).

ದೇವರು ನಮ್ಮ ಜೀವಿತದಲ್ಲಿ ಕಾರ್ಯಮಾಡಿದ ಹಾಗೆ ಆಹಾಬನ ಜೀವಿತದಲ್ಲಿಯೂ ಖಚಿತವಾಗಿ ಕಾರ್ಯಮಾಡಿದ್ದಾನೆ. ಆತನ ಉದ್ದೇಶವು ಯಾವಾಗಲೂ ಆತನೇ ಕರ್ತನೆಂದು ನಮ್ಮ ಮೇಲೆ ಪ್ರಭಾವ ಬೀರುವುದೇ ಆಗಿದೆ! ನಾನು ನಿಮ್ಮಲ್ಲಿ ಬೇಡಿಕೊಳ್ಳು ತ್ತೇನೆ; ದೇವರ ಕೃಪೆಯನ್ನು ಹೀಗೆಳೆಯಬೇಡಿರಿ; ಯಾವುದನ್ನು ಹಗುರವಾಗಿ ಎಣಿಸಬೇಡಿರಿ. ಬದಲಾಗಿ ಇದೊಂದು ಅವಕಾಶ ಎಂದು ತೆಗೆದುಕೊಳ್ಳಿರಿ.

ದೇವರು ಆತನನ್ನು ಒಪ್ಪಿಕೊಳ್ಳಲು ಮತ್ತು ಆತನೆಡೆಗೆ ವಿಧೇಯತೆಯಿಂದ ಬರಲು ಅನೇಕ

ಅವಕಾಶಗಳ ಮೇಲೆ ಅವಕಾಶವನ್ನು ನಮಗೆ ಕೊಟ್ಟಿದ್ದಾನೆ ಆದರೆ ಸಮಯಬಂದಾಗ ಆತನ ತಾಳ್ಮೆಯು ಮುಗಿದುಹೋಗುತ್ತದೆ. ಎಷ್ಟು ಅವಕಾಶಗಳಲ್ಲಿ ನೀನು ಆತನಿಗೆ ವಿಧೇಯನಾಗಿದ್ದಿ? ಎಷ್ಟು ಅವಕಾಶಗಳನ್ನು ನೀನು ಹೋಗಲು ಬಿಟ್ಟಿದ್ದಿ? ನೀನು ಎಷ್ಟು ಅವಕಾಶಗಳನ್ನು ಸಮಯದಿಂದ ಸಮಯಕ್ಕೆ ನಿರ್ಲಕ್ಷಿಸಿದ್ದೀ, ಇದು *ನಿನ್ನ* "ಕೊನೆಯ ಅವಕಾಶವೇ"?

---

ಟಿಪ್ಪಣಿಗಳು

[1]"ಬೆನ್ಹದದ" ಇದು ಅನೇಕ ಅರಮೀಯ (ಸಿರಿಯಾ) ಅರಸರಿಗೆ ಅನ್ವಯಿಸುತ್ತಿದ್ದ ರಾಜವಂಶೀಯ ಹೆಸರು. ಕೆಲವರು ಈತನನ್ನು I ನೇಯ ಬೆನ್ಹದದ ಇರಬೇಕು ಎಂದು ಊಹಿಸುವವರಾಗಿದ್ದಾರೆ. [2]ಇವುಗಳು ಬಹುಶಃ ಬೆನ್ಹದದ ಅಡಿಯಲ್ಲಿರುವ ಉಪರಾಜ್ಯಗಳಾಗಿದ್ದು ಸಿರಿಯಾದಿಂದ ಆಡಳಿತಕ್ಕೊಳಗಾದಂತಹ ಪ್ರಾಂತಗಳು ಇರಬಹುದು. [3]ಅನೇಕ ವಿಮರ್ಷಕರು ಈತನು ಅದೇ ಬೆನ್ಹದದನು ಆಗಿದ್ದನು ಎಂದು ನಂಬುವವರಾಗಿದ್ದಾರೆ. [4]ಕೆಲವರು ನಂಬುವುದೇನೆಂದರೆ ಈ ಅಧ್ಯಾಯವು ಆಹಾಬನು ಒಳ್ಳೆಯ ಬೆಳಕಿನಲ್ಲಿದ್ದನು. "ಈ ಲೇಖಕನಿಗೆ ಆ ಬೆಳಕನ್ನು" ಹುಡುಕುವದು ಕಠಿಣವಾಗಿತ್ತು. [5]ಇದು ಸೂಚಿಸುವುದೇನೆಂದರೆ ಆಹಾಬನು ಆ ಅರ್ಥವನ್ನು ಹೊಂದಿರಲಿಕ್ಕಿಲ್ಲ. ಆಹಾಬನು "ಉಸಿರಾಡುವಕೋಣೆಯನ್ನು" ತೆಗೆದುಕೊಳ್ಳುವ ಶರತ್ತಿಗೆ ಒಪ್ಪಿದ್ದನು, ಆಹಾಬನು ಇನ್ನೂ ಈ ಶರತ್ತುಗಳಿಗೆ ಒಪ್ಪುವ ಮೂಲಕ ತನ್ನ ಗುಣವನ್ನು ತೋರಿಸಿದನು. [6]ಬೆನ್ಹದದನ ಮಾತಿನಲ್ಲಿ ಇನ್ನೂ ವೈವಿಧ್ಯಮಯವಾದ ಅರ್ಥದ ಸಾಧ್ಯತೆಯು ಇದೆ, ಆದರೆ ಇದು ಸಾಮಾನ್ಯವಾದ ವಿಚಾರವನ್ನು ಕೊಡುವುದಾಗಿದೆ. [7]"ಆತನ ಬಿಲ್ಲು" ಎಂಬುದು ಭಾಷಾಂತರಕಾರರಿಂದ ಕೆಡಿಸಲ್ಪಟ್ಟಿದ್ದು ಆಗಿದೆ, ಆದರೆ ಈ ಸಂದರ್ಭದ ಬೆಳಕಿನಲ್ಲಿ ಇದನ್ನು ಊಹಿಸುವದು ಸರಿಯಾದದು ಎಂದು ಕಾಣುತ್ತದೆ. [8]ಸಜೀವ ಬೈಬಲ್ ಆಹಾಬನು ಬಳಸಿದ ಗಾದೆಮಾತುಗಳಿಗೆ ಬದಲಾಗಿ ಒಂದನ್ನು ಬಹುಶಃ ಹೊಂದಿರಬಹುದು. [9]ಗುಡಾರಗಳ ಹಬ್ಬಗಳಿಗೋಸ್ಕರ ಇಸ್ರಾಯೇಲ್ಯರಿಂದ ಡೇರೆಗಳು ತೆಗೆದುಹಾಕಲ್ಪಟ್ಟವು ಎಂಬದಕೋಸ್ಕರವು ಇದೇ ರೀತಿಯ ಪದವು ಇಬ್ರಿಯದಲ್ಲಿ ಇದೇ ಅರ್ಥವನ್ನು ಹೊಂದಿದೆ. ಅಲ್ಲಿ ಡೇರೆಗಳು ಕಂಟಿಗಳಿಂದ ಮತ್ತು ಮರದ ಟೊಂಗೆಗಳಿಂದ ಮಾಡಲ್ಪಡುತ್ತಿದ್ದನು ಅವರು ಅಮೇರಿಕದ ಹಿಂದಿನ ದಿನಗಳಲ್ಲಿ "ಕುಂಚದ ಚಕ್ರ" ಎಂದು ಕರೆಯುತ್ತಿದ್ದರು. [10]ಸ್ಯಾಮ ಹಾಟ್ಸನ್ ಇದೇ ರೀತಿಯ ಕೌಶಲ್ಯವನ್ನು ಸಾಂತಾ ಅನಾನನ್ನು ಸನ್ ಜಾಂಸಿಂತೋ ಯುದ್ಧದಲ್ಲಿ ಬಳಸಿದನು ಎಂದು *1 ಅರಸು ಮೇಲಿನ ವಿಮರ್ಶೆಯಲ್ಲಿ* ಬ್ರೂಟನ್ ಕಾಫ್‌ಮನ್‌ರವರು ತಿಳಿಸಿದ್ದಾರೆ (Abilene, Tex.: ACU Press, 1993), 263.

[11]ಕುಡಿಯುವಿಕೆಯ ಅಪಾಯದ ಮೇಲೆ ಅಲ್ಲಿ ಒಂದು ಪಾಠವಿದೆ. [12]ಇದು ಕೇವಲ 232 ಸಂಖ್ಯೆಯನ್ನು ಸೂಚಿಸುವದೂ ಅಥವಾ 7,000ನ್ನು ಸೂಚಿಸುವದೂ ಎಂಬುದರ ಬಗೆಗೆ ಅಲ್ಲಿ ಕೆಲ ಪ್ರಶ್ನೆಗಳಿವೆ. [13]ಬಹುಶಃ ಇದು ವೈಯಕ್ತಿಕ ಕವಲುಗಾರರದಿರಬಹುದು. [14]ಇದು ವಚನ 13ರಲ್ಲಿ ಪ್ರವಾದಿಯು ಸೂಚಿಸಿದಂತದ್ದಿರಬಹುದು. [15]ಇದು ಸಜ್ಜೀವ ವಾಕ್ಯದ ಸಾರಾಂಶವಾಗಿದೆ. [16]ಮೂವತ್ತೆರಡೂ ಅರಸರನ್ನೂ ಸೇನೆಯ ಅನುಭವಿ ಯೋಧರ ಜೊತೆ ಸೇನಾಧಿಪತಿಗಳ ನ್ನಾಗಿ ಬದಲಾಯಿಸು ಎಂಬುದು ಬೆನ್ಹದದನಿಗೆ ಕೊಡಲ್ಪಟ್ಟ ಸಲಹೆಯ ಇನ್ನೊಂದು ಮುಖವಾ ಗಿತ್ತು. ಈ ಮೂವತ್ತೆರಡು ಅರಸರು ಹಿಂದಿನ ಯುದ್ಧದಲ್ಲಿ ಭಯಭ್ರಾಂತರಾಗುವ ಸಾಧ್ಯತೆಯೂ ಇದೆ. ಅರಸನಾಗಿದ್ದುಕೊಂಡು ಒಮ್ಮಿಂದೊಮ್ಮಲೆ ಒಬ್ಬನು ಜನರನ್ನು ಯುದ್ಧಕ್ಕೆ ನಡೆಸುವುದಕ್ಕೆ ಯೋಗ್ಯನಾಗಿಸುವದು ಅಸಾಧ್ಯವಾದುದ್ದು. [17]ವಾಕ್ಯವು ಹೇಳುವುದೇನೆಂದರೆ "ಅಫೇಕದವರೆಗೆ ಯುದ್ಧಕ್ಕೆ ಹೋಗು" ಎಂದು. ಅನೇಕ ಅಫೇಕಗಳು ವೇದಭಾಗದಲ್ಲಿ ಸೂಚಿತವಾಗಿರುವುದರಿಂದ ಸರಿಯಾದ ಸ್ಥಳವು ನಮಗೆ ಖಚಿತ ವಾಗಿ ತಿಳಿಯದು. ವಚನ 23 ಮತ್ತು 25ರ ಮೂಲದಿಂದ ಆ ಪಟ್ಟಣವು ಮೈದಾನ ಪ್ರದೇಶದಲ್ಲಿ ಇತ್ತು ಎಂದು ತಿಳಿಯುತ್ತದೆ. [18]ಇದು ದೇವರ ಪ್ರವಾದಿಯನ್ನು ವರ್ಣಿಸಲು ಬಳಿಸಿದ ಎರಡನೆಯ ಪಾರಿಭಾಷಿಕವಾಗಿದೆ. ಹಿಂದಿನ ಸಿರಿಯಾದ ವಿರುದ್ಧದ ಯುದ್ಧಕ್ಕ ಸಂಬಂಧಿತವಾಗಿ ಇಲ್ಲಿ ಸೂಚಿತವಾದವನು ಭಿನ್ನ ವಾದ ಪ್ರವಾದಿಯಾಗಿರಬೇಕೆಂದು ಕಾಣುತ್ತದೆ. [19]ವಚನ 26 ಮತ್ತು 30ರಲ್ಲಿ ಉಪಯೋಗಿಸಿದ ಸಂಖ್ಯೆಗಳು ನಿಜವಾಗಿ ಇದ್ದವುಗಳೋ ಅಥವಾ ಸಂಕೇತಾರ್ಥಕವಾದವೋ ಎಂಬುದರ ಬಗೆಗೆ ಪಂಡಿತರು ವಾದಮಾಡುತ್ತಾರೆ ಹೇಗೋ. "27,000" ಎಂಬುದು ಸಂಕೇತಾರ್ಥಕವಾಗಿ ತನ್ನನ್ನು ತಾನು ಮನಪೂರ್ವಕಾಗಿ ಸಹಾಯ ಮಾಡದಂತದ್ದಾಗಿದೆ. ಇಲ್ಲಿರುವ ಅಂಕಿಅಂಶಗಳು ನಿಜವಾದದ್ದು ಎಂದು ಯೋಚಿಸಲು ಯಾವ ಕಾರಣವೂ ಇಲ್ಲ. ಸಿರಿಯಾದ ಯುದ್ಧದ

ಕೆಲ ದಾಖಲೆಗಳು ಸೂಚಿಸುವುದೇನೆಂದರೆ ಪಾದಾತಿಳದ ಸೈನ್ಯವು ಗಾತ್ರದ್ದಾಗಿರುತ್ತದೆ ಅಥವಾ ದೊಡ್ಡದಾಗಿರುತ್ತದೆ. [20]ಈ ತಂತ್ರವು ಇತಿಹಾಸದಲ್ಲಿ ಅನೇಕ ಸಮಯ ಯಶಸ್ವಿಯುತವಾಗಿ ಬಳಿಕೆಯಾಗಿದೆ; ಕಲಾಸ್ ನಾಗರೀಕರು IIIನೇಯ ಎಡ್ವರ್ಡ್‌ರಿಂದ ಪಟ್ಟಣವು ಆಕ್ರಮಕೊಳ್ಳಪಟ್ಟ ನಂತರ ಇದನ್ನು ಮಾಡಿದರು.

[21]Victor Lloyd. [22]Coffman, *Commentary on 1 Kings*, 268. [23]ಆತನು ಇಟ್ಟುಕೊಳ್ಳಲಾರದೇ ಹೋದ ವಾಗ್ದಾನ (1 ಅರಸು 22:3). [24]ಇದು ಬಹುಶಃ ಇದರ ಅರ್ಥವು ದಮಸ್ಕದಲ್ಲಿ "ಓಣಿಗಳನ್ನು ಮಾಡುವದಕ್ಕೆ" ಒಪ್ಪಿಗೆ ಕೊಡುವದಾಗಿರಬಹುದು. RSV ಯಲ್ಲಿ ಇದು "ನೀನು ನಿನ್ನಷ್ಟಕ್ಕೆ ನೀನೇ ದಮಸ್ಕದಲ್ಲಿ ಬಾಜಾರುಗಳನ್ನು (ಪೇಟೆಗಳನ್ನು) ತೆರೆಯಬಹುದು" ಎಂದಿದೆ. [25]ಒಂದಂತೂ ಖಚಿತ: ಬೆನ್ಹದದನು ತನ್ನ ಸಹೋದರನಿಗಾಗಿ ಸಂಪೂರ್ಣ ಪ್ರೀತಿಯನ್ನು ಬಿಡಲಿಲ್ಲ (1 ಅರಸು 22:31). [26]ಬಹುಶ ಸೌಲನು ಮಾಡಿದಂತೆ "ಬಹುಮಾನವು" ತನ್ನ ಶಕ್ತಿಯ ಮೂಲಕ ತೋರಿಸಿದನು. [27]ಸೌಲನು ಆಗಾಗನನ್ನು ಉಳಿಸಿಕೊಂಡದರಲ್ಲಿ ಮತ್ತು ಆಹಬನು ಬೆನ್ಹದದನನ್ನು ಉಳಿಸಿಕೊಂಡಿದುದರಲ್ಲಿ ಅನೇಕ ಸಾಮ್ಯಗಳಿವೆ. [28]ಮೂರನೆಯ ಪಾರಿಭಾಷಿಕವು "ಪ್ರವಾದಿ" ಎಂದು ಈ ಕಥೆಯ ಭಾಗದಲ್ಲಿ ಬಳಸಿದ್ದು ಆತನೊಬ್ಬ "ಪ್ರವಾದಿಯ ಮಗನಾಗಿರಬಹುದು." "ಮಗನಾದ" ಇದು ಇಬ್ರಿಯ ಭಾಷೆಯ ವಿವರಣೆಯಾಗಿದ್ದು ಇದು "ಪಾಲುತೆಗೆದುಕೊಳ್ಳುವುದನ್ನು" ಸೂಚಿಸುವುದಾಗಿದೆ. ಪ್ರವಾದಿಯ ಮಗನು ಎಂಬುದು ಪ್ರವಾದಿ ಎಂಬ ನುಡಿಗಟ್ಟಿನ ರೀತಿಯ ಹೇಳಿಕೆಯಾಗಿದೆ. ಜೋಸ್ಫಸ್ ಮತ್ತಿತರರು ನಂಬುವುದೇನೆಂದರೆ ಈತನು ಪ್ರವಾದಿಯಾದ ಮೀಕನಾಗಿದ್ದು ನಂತರದ ಎರಡು ಅಧ್ಯಾಯದಲ್ಲಿ ಆತನನ್ನು ಭೋಟಿಯಾಗಲ್ಲಿದ್ದೇವೆ (1 ಅರಸು 22:8 ಹೋಲಿಸಿ). [29]ಇಬ್ರಿಯ ವೇದಭಾಗದಲ್ಲಿ "ತನ್ನ ಕಣ್ಣಿನ ಮೇಲೆ ಮುಚ್ಚಿಕೊಂಡಿದ್ದನು" ಎಂದಿದೆ. KJV ಯಲ್ಲಿ "ಬೂದಿಯಂತೆ" ಮುಚ್ಚಿಕೊಂಡಿದ್ದನು. ಆ ಗಾಯಕ್ಕೆ ಸುತ್ತಿದ ಬಟ್ಟೆಯು ಹೆಚ್ಚುಕಡಿಮೆ ಅವನನ್ನು ಮರೆ ಮಾಡುವಂತೆ ಇತ್ತು. [30]ಪ್ರವಾದಿಯು ಗಾಯಗೊಂಡಿದ್ದನು, ಆದರೆ ಯುದ್ಧದಲ್ಲಿ ಅಲ್ಲ. ವಚನ 35 ರಿಂದ 37 ರವರೆಗೆ ಕಥೆಯನ್ನು ನಾವು ನೋಡುವಾಗ ಪ್ರವಾದಿಯು ತನಗೆ ಹೊಡೆಯಲು ಕೇಳುತ್ತಿದ್ದಾನೆ.

[31]2 ಸಮುವೇಲ 12. [32]ಮುಂದಿನ ಪಾಠವನ್ನು ನೋಡಿರಿ.

---

## ಪಾಠದ ರೂಪರೇಷೆ

**ಪೀಠಿಕೆ**

A. ಒಂದೇ ಒಂದು ಅವಕಾಶವು ಇದೆ ಎಂದು ಯೋಚಿಸುವದು ಭಯದ ಸಂಗತಿಯಾಗಿದೆ! ನಮ್ಮ ಪಾಠವು "ಆಹಾಬನ ಕೊನೆಯ ಅವಕಾಶ" ಎಂಬುದಾಗಿದೆ.
   1. ಎಲೀಯನು ಈಗಾಗಲೇ ಆಹಾಬನಿಗೆ ಒಂದು ಅವಕಾಶವನ್ನು ಕೊಟ್ಟುಬಿಟ್ಟಿದ್ದನು (ಅಧ್ಯಾಯ 19); ಆತನು ಆಹಾಬನಿಗೆ ಎರಡನೆಯ ಅವಕಾಶವನ್ನ ಕೊಡಲು ಸಿದ್ಧನಿದ್ದಿಲ್ಲ.
   2. ದೇವರು ಆಹಾಬನಿಗೆ ಎರಡನೆಯ ಅವಕಾಶವನ್ನು ಕೊಟ್ಟನು - ನಿಜವಾಗಿ ಒಂದಲ್ಲ, ಮೂರು "ಕೊನೆಯ ಅವಕಾಶಗಳು" ಅಥವಾ ಆಶ್ಚರ್ಯಕರ ವಾದ ಕೃಪೆ.

B. 1 ಅರಸು 20ರಲ್ಲಿ ದೇವರು ಆಹಾಬ ಮತ್ತು ಇಸ್ರಾಯೇಲ್ಯರಿಗೆ ಸಿರಿಯದ ಮೇಲೆ ಜಯತಂದು ಕೊಡುವಲ್ಲಿ ಸಹಾಯಮಾಡುತ್ತಾನೆ ಎಂಬುದನ್ನು ನಾವು ನೋಡುತ್ತೇವೆ.
   1. ದೇವರು ತಾನು ಆಯ್ದುಕೊಂಡ ಜನರನ್ನು ರಕ್ಷಿಸಲು ಇದೆಲ್ಲವನ್ನೂ ಮಾಡಿದನು.
   2. ವಚನ 13 ಮತ್ತು 28ರಲ್ಲಿ ದೇವರು ತನ್ನ ಮನದಲ್ಲಿ ಇನ್ನೊಂದು ಉದ್ದೇಶ ವನ್ನು ಸಹ ಹೊಂದಿದ್ದನು ಎಂದು ಕಲ್ಲು ಹೃದಯದವನಾದ ಆಹಾಬ ಮತ್ತು ಆತನ ಹಿಂಬಾಲಕರಿಗೆ ತಾನೇ ನಿಜ ದೇವರು ಎಂದು ಮನವರಿಕೆ ಮಾಡವಲ್ಲಿ ತಿರುಗಿ ಪ್ರಯತ್ನಿಸುತ್ತಲೇ ಇದ್ದನು ಎಂಬುದನ್ನು ನೋಡು ತ್ತೇವೆ.

I. ಆಹಾಬನ ಮೊದಲನೆಯ ಅವಕಾಶ (20:1-21)

A. ಬೆನ್ಹದದನು ಸಿರಿಯಾದ ಅರಸನು. ಸಮಾರ್ಯ ಪಟ್ಟಣವನ್ನು ನಾಶಮಾಡಲು ಪ್ರಯತ್ನಿಸುತ್ತಿರುವನು (ವಚನಗಳು 1-12).

1. ಸಮಾರ್ಯದ ಮುತ್ತಿಗೆಯು ಬಹುಶಃ ಬಹಳ ಸುದೀರ್ಘವಾಗಿರಬಹುದು; ಆಹಾಬನು ಈಗಾಗಲೇ ಎಲ್ಲಾ ಶರತ್ತುಗಳಿಗೆ ಒಪ್ಪಿಕೊಂಡಿದ್ದನು (2 ಅರಸು 6:24ರಲ್ಲಿ ಬೆನ್ಹದದನು ಆಕ್ರಮಣ ಮಾಡಿದ ನಂತರದಲ್ಲಿನ ಗಂಭೀರತೆಯನ್ನು ಗಮನಿಸಿರಿ).
2. ಬೆನ್ಹದದನು ಮೊದಲ ಶರತ್ತನ್ನು ಪ್ರಾರಂಭಿಸಿದನು: "ನಿನ್ನ ಬೆಳ್ಳಿಗಳು ನನ್ನವು; ನಿನ್ನ ಅತಿ ಸುಂದರವಾದ ಪತ್ನಿಯರು ಮತ್ತು ಮಕ್ಕಳು ನನ್ನವರು" (ವಚನ 3). ಆಹಾಬನು ಒಪ್ಪಿದನು (ವಚನ 4). ಒಬ್ಬ ಅರಸನ ಸ್ತ್ರೀಯರಿರುವ ಸ್ಥಾನವನ್ನು ಒಪ್ಪಿಸುವುದು ಆತನ ಮುಕುಟವನ್ನು, ಆತನ ಪುರುಷತ್ವವನ್ನು ಮತ್ತು ಸ್ವಪ್ರತಿಷ್ಠೆಯನ್ನು ಒಪ್ಪಿಸಿದಂತೆ.
3. ಬೆನ್ಹದದನು ತನ್ನ ಶರತ್ತನ್ನು ಬದಲಾಯಿಸಿದನು, ಆಹಾಬನ ಸಲಹೆಗಾರರು ಅದನ್ನು ವಿರೋಧಿಸುವಂತೆ ಒತ್ತಾಯಿಸುತ್ತಾರೆ. ಆಹಾಬನು ನಿರಾಕರಿಸಿದೊಡನೆ ಬೆನ್ಹದದನು ಪಟ್ಟಣವನ್ನು ನಾಶಮಾಡಲು ನಿರ್ಧರಿಸುತ್ತಾನೆ.

B. ಆಹಾಬನು ಆತನೇ ದೇವರೆಂದು ಅರಿತುಕೊಳ್ಳಬೇಕೆಂದೇ ದೇವರು ತನ್ನನ್ನು ತೋರಿಸಿಕೊಂಡನು (ನೋಡಿರಿ ವಚನ 13). ಈ ಅಧ್ಯಾಯದಲ್ಲಿ ಆಹಾಬನು ದೇವರನ್ನು ಅರಿಯಲು ಮತ್ತು ಪಶ್ಚಾತ್ತಾಪಪಡಲು ಇರುವ ಮೊದಲನೆಯ ಅವಕಾಶವಾಗಿತ್ತು.

1. ಎಲೀಯನಲ್ಲದೆ ಇನ್ನೊಬ್ಬ ಪ್ರವಾದಿಯು ಇಸ್ರಾಯೇಲ್ಯರಲ್ಲಿ ಇದ್ದನು (ವಚನಗಳು 13, 22; ಅದರ ಜೊತೆಯಲ್ಲಿ 28, 35ನ್ನು ಸಹ ನೋಡಿರಿ). ಬಹುಶಃ ಈ ಪ್ರವಾದಿಯು ಅಡಗಿಕೊಂಡಿದ್ದು ಎಲೀಯನು ಕರ್ಮೆಲ ಬೆಟ್ಟದಲ್ಲಿ ತೋರಿದ ಧೈರ್ಯದಿಂದ ಈಗ ದಿಟ್ಟನಾಗಿದ್ದಾನೆ.
2. 232 ಯೌವನಸ್ಥರ ನಾಯಕತ್ವದಿಂದ ಈ ದಾಳಿಯು ನಡೆಯಿತು (ಬಹುಶಃ ಇವರು ಸ್ಥಳೀಯ ಆಡಳಿತಗಾರರ ಸೇವಕರಿರಬಹುದು, ಮತ್ತು ಯಾವುದೇ ಯುದ್ಧ ಕೌಶಲ್ಯ ಹೊಂದದವರಿರಬಹುದು), 7,000 ಇಸ್ರಾಯೇಲ್ ಸೈನಿಕರು ಅವರನ್ನು ಹಿಂಬಾಲಿಸಿದರು.
3. ಬೆನ್ಹದದನು ಮತ್ತನಾಗಿ ಆಜ್ಞೆಯನ್ನು ಕೊಟ್ಟದ್ದರಿಂದ ಆತನ ದಳವು ಕ್ಷಿಪ್ರ ವಾಗಿ ಕಗ್ಗೊಲೆಗೆ ಈಡಾಯಿತು.
4. ಆಹಾಬನು ತನ್ನ ಪಟ್ಟಣದಿಂದ ಹೊರಬಂದು ಆಕ್ರಮಣಕ್ಕೊಳಗಾದ ಪಟ್ಟಣಕ್ಕೆ ಬಂದನು (ವಚನ 21). ಆತನು ಯೆಹೋವನೇ ದೇವರೆಂದು ಗುರುತಿಸುವ ಕಾರ್ಯವನ್ನು ಮಾಡಲಿಲ್ಲ. ಒಂದನೆಯ ಅವಕಾಶವು ಹೋಯಿತು.

II. ಆಹಾಬನ ಎರಡನೆಯ ಅವಕಾಶ (20:22-30)

A. ಒಂದು ವರ್ಷದ ನಂತರ (ಪ್ರವಾದಿಯಿಂದ ಮುಂತಿಳಿಸಲ್ಪಟ್ಟಂತೆ), ಸಿರಿಯಾವು ಇಸ್ರಾಯೇಲ್ಯರ ಮೇಲೆ ತಿರುಗಿ ಯುದ್ಧಕ್ಕೆ ಬಂದಿತ್ತು (ವಚನಗಳು 22-27).

1. ಸಿರಿಯದ ತಂತ್ರವು ಈ ಸಾರಿ ಇಸ್ರಾಯೇಲ್ಯರು ಸಮಾರ್ಯದ ಸುತ್ತಲಿರುವ ಬೆಟ್ಟಮಯ ಪ್ರದೇಶದ ಬದಲಾಗಿ ಮೈದಾನದಲ್ಲಿ

(ಕೊಳ್ಳದಲ್ಲಿ) ಯುದ್ಧಮಾಡಲಿ ಎಂಬುದಾಗಿತ್ತು.

2. ಸಿರಿಯಾದ ಸೇನೆಯು ದೇಶದ ತುಂಬೆಲ್ಲಾ ಹರಡಿಕೊಂಡಿತ್ತು, ಇಸ್ರಾಯೇಲ್ಯರು "ಎರಡು ಕುರಿ ಹಿಂಡಿನಂತಿದ್ದರು" (ವಚನ 22). ಇದು ತಿರುಗೊಂದಾವರ್ತಿ ಜಯಿಸಲಾಗದ ಪರಿಸ್ಥಿತಿಯಾಗಿತ್ತು.

B. ದೇವರು ತಾನು ಸಾರ್ವತ್ರಿಕ ದೇವರು ಎಂದು ತಾನೇ ನಿಜವಾದ ದೇವರು ಎಂದೂ ಆಹಾಬನಿಗೆ ತೋರಿಸಲು ತಿರುಗಿ ಮಧ್ಯೆ ಪ್ರವೇಶಿಸಿದನು (ವಚನ 28) ಇದು ಆಹಾಬನಿಗೆ ಎರಡನೆಯ ಅವಕಾಶವಾಗಿತ್ತು.

1. ಆಶ್ಚರ್ಯಕರವಾದ ವಿಜಯವು ಬಂದಿತು (ವಚನಗಳು 29, 30). ಆತನ ಸೈನ್ಯವು ಎಲ್ಲವನ್ನು ನಾಶಮಾಡಿತು, ಬೆನ್ಹದದನು ಹೇಡಿಯಂತೆ ವಶಪಡಿಸಿಕೊಂಡ ಪಟ್ಟಣದ ಒಂದು ಸಣ್ಣ ಕೋಣೆಯಲ್ಲಿ ಅಡಗಿಕೊಂಡನು. ದೇವರು ಅವನನ್ನು ಆಹಾಬನ ಕೈಗೆ ಒಪ್ಪಿಸಿದನು.

2. ತಿರುಗಿ ಆಹಾಬನು ಈ ದೊಡ್ಡ ಜಯಕ್ಕೆ ಕಾರಣವನ್ನು ಗುರುತಿಸುವ ಸೂಚನೆಯನ್ನೂ ಕೊಡಲಿಲ್ಲ. ಎರಡನೆಯ ಅವಕಾಶವು ಹೋಯಿತು.

III. ಆಹಾಬನ ಕೊನೆಯ ಅವಕಾಶ (20:30-43)

A. ಆಹಾಬನ ಕೊನೆಯ ಅವಕಾಶವು ಬೆನ್ಹದದನ ಜೊತೆ ಏನು ಮಾಡಬೇಕೆಂಬುದನ್ನು ದೇವರೊಡನೆ ಸಮಾಲೋಚಿಸಿ ಆತನಿಗೆ ವಿಧೇಯನಾಗುವ ವಿಷಯದ ಮೇಲೆ ಇದೆ. ಬದಲಾಗಿ ಕರ್ತನ ವಾಕ್ಯವು ಏನು ಹೇಳುತ್ತದೆ ಎಂಬುದನ್ನೂ ಕೂಡಾ ನೋಡದೆ ಎಲ್ಲಿಯೂ ನಿಲ್ಲದೆ (1 ಅರಸು 22:4), ಆಹಾಬನು ಬೆನ್ಹದದನನ್ನು ಗೌರವದಿಂದ ಮೆಚ್ಚುತ್ತಾನೆ ಮತ್ತು ಆತನನ್ನು ಬಿಡುಗಡೆ ಮಾಡುತ್ತಾನೆ (ವಚನಗಳು 30-34).

B. ಆಹಾಬನಿಗೆ ಇನ್ನು ಯಾವ ಅವಕಾಶಗಳಿಲ್ಲ (ವಚನಗಳು 35-43)!

1. ಪ್ರವಾದಿಯು ಆಹಾಬನಿಗೆ ಕೈದಿಯೊಬ್ಬನು ಪರಾರಿಯಾದ ಕಥೆಯನ್ನು ಹೇಳುತ್ತಾನೆ (ಈ ಸಾಮ್ಯವು 2 ಸಮುವೇಲ 12:1-4ರಲ್ಲಿ ಅರಸನಾದ ದಾವೀದನಿಗೆ ನಾತಾನನು ಹೇಳಿದುದಕ್ಕೆ ಸಮವಾಗಿದೆ), ನಂತರದಲ್ಲಿ ಪ್ರವಾದಿಯು ತಾನು ಬೆನ್ಹದದನು ಹೋಗಲು ಬಿಟ್ಟ ಆಹಾಬನ ಬಗೆಗೆ ಮಾತನಾಡುತ್ತಿರುವುದಾಗಿ ಪ್ರಕಟಿಸುತ್ತಾನೆ. ಆಹಾಬನು ಬೆನ್ಹದದನ ಜೀವವನ್ನು ಉಳಿಸಿದ್ದಕ್ಕಾಗಿ ಆತನು ತನ್ನ ಸ್ವಂತ ಜೀವವು ತೆಗೆಯಲ್ಪಡುವದು (ವಚನ 42).

2. ಆಹಾಬನು ತನ್ನ ಕೊನೆಯವಕಾಶವನ್ನು ತಪ್ಪಿಸಿಕೊಂಡನು.

**ಮುಕ್ತಾಯ**

A. ದೇವರು ಆಹಾಬನ ಜೀವಿತದಲ್ಲಿ ಕಾರ್ಯಮಾಡಿದ ಹಾಗೆ ನಮ್ಮ ಜೀವಿತದಲ್ಲಿ ಕಾರ್ಯಮಾಡುತ್ತಾನೆ. ಆತನ ಉದ್ದೇಶವು ಯಾವಾಗಲೂ ಆತನೇ ಕರ್ತನೆಂದು ನಮ್ಮ ಮೇಲೆ ಪ್ರಭಾವ ಬೀರುವುದೆ ಆಗಿದೆ!

B. ದೇವರು ತನ್ನನ್ನು ಕರ್ತನೆಂದು ಒಪ್ಪಿಕೊಳ್ಳಲು ಮತ್ತು ಆತನೆಡೆಗೆ ವಿಧೇಯತೆಯಿಂದ ಬರಲು ಅನೇಕ ಅವಕಾಶಗಳ ಮೇಲೆ ಅವಕಾಶವನ್ನು ನಮಗೆ ಕೊಡುತ್ತಾನೆ. ಆದರೆ ಕೆಲ ವಿಷಯಗಳಲ್ಲಿ ಆತನ ತಾಳ್ಮೆಯು ಕಡಿಮೆಯಾಗುತ್ತಾ ಹೋಗುತ್ತದೆ. ಎಷ್ಟು ಅವಕಾಶಗಳಲ್ಲಿ ನೀನು ಆತನಿಗೆ ವಿಧೇಯನಾಗಿದ್ದಿ? ಎಷ್ಟು ಅವಕಾಶಗಳನ್ನು ನೀನು ಹೋಗಲು ಬಿಟ್ಟಿದ್ದೀ? ನೀನು ಅವಕಾಶಗಳನ್ನು ಸಮಯದಿಂದ ಸಮಯಕ್ಕೆ ನಿರ್ಲಕ್ಷಿಸಿದ್ದೀ, ಇದು, *ನಿನ್ನ* ಕೊನೆಯ ಅವಕಾಶವೇ?